22	TH	೨೨	ಗು		೧೦	೨೩-೩೧	ಉತ್ತರಾ	೩೩-೨೧		೮		೨೩
23	F	೨೩	ಶು		೧೧	೨೧- ೫	ಹಸ್ತಾ	೩೨-೪೦		೯		೨೪
24	S	೨೪	ಶ		೧೨	೧೯-೨೭	ಚಿತ್ರಾ	೩೨-೪೭		೧೦		೨೫
25	SUN	೨೫	ಆ		೧೩	೧೮-೩೯	ಸ್ವಾತೀ	೩೩-೪೨		೧೧		೨೬
26	M	೨೬	ಚ		೧೪	೧೮-೪೪	ವಿಶಾಖಾ	೩೫-೩೧		೧೨		೨೭
27	TU	೨೭	ಮ		●	೧೯-೫೨	ಅನುರಾಧಾ	೩೮-೨೦		೧೩		೨೮
28	W	೨೮	ಬು	ಮಾ. ಶು. ಪ.	೧	೨೨- ೪	ಜ್ಯೇಷ್ಠಾ	೪೨-೧೫		೧೪		೨೯
29	TH	೨೯	ಗು		೨	೨೫-೩೨	ಮೂಲಾ	೪೭-೧೭		೧೫	ಜಮಾ.	೧
30	F	೩೦	ಶು		೩	೩೦- ೮	ಪೂರ್ವಾಷಾಢ	೫೩-೨೪		೧೬		೨

ಕರ್ತನಿಗೆ ಸ್ತೋತ್ರದಿಂದ ಹಾಡಿರಿ; ಆತನು ಆಕಾಶವನ್ನು ಮೋಡಗಳಿಂದ ಮುಚ್ಚುತ್ತಾನೆ; ಭೂಮಿಗೆ ಮಳೆಯನ್ನು ಸಿದ್ಧ ಮಾಡುತ್ತಾನೆ; ಬೆಟ್ಟಗಳಲ್ಲಿ ಹುಲ್ಲನ್ನು ಮೊಳೆಸುತ್ತಾನೆ. ಕೀರ್ತ. ೧೪೭, ೭. ೮.

1894 NOVEMBER—ನವಂಬರ ೧೮೯೪

ತಾರೀಖು	ಸೂರ್ಯ ಉದಯ ಘಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಘಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಘಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಘಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಘಂಟೆ	ಚಂದ್ರ ಅಸ್ತ ನಿಮಿಷ
					ಪ್ರಾತಃ.		ಮಧ್ಯಾಹ್ನ		ರಾತ್ರಿ	
೧	೫	೫೬	೫	೩೨	೮	೫೯	೨	೪೩	೮	೨೬
೨	೫	೫೬	೫	೩೨	೯	೫೩	೩	೩೬	೯	೨೦
೩	೫	೫೬	೫	೩೧	೧೦	೪೩	೪	೨೮	೧೦	೧೩
೪	೫	೫೭	೫	೩೧	೧೧	೩೦	೫	೧೭	೧೧	೫
					ಮಧ್ಯಾಹ್ನ					
೫	೫	೫೭	೫	೩೧	೧೨	೧೪	೬	೪	೧೧	೫೬
೬	೫	೫೭	೫	೩೦	೧೨	೫೩	೬	೪೮	ಪ್ರಾತಃ.	
೭	೫	೫೮	೫	೩೦	೧	೩೦	೭	೩೦	೧೨	೪೫
೮	೫	೫೮	೫	೩೦	೨	೬	೮	೧೧	೧	೩೨
೯	೫	೫೮	೫	೩೦	೨	೪೧	೮	೫೨	೨	೧೯
೧೦	೫	೫೯	೫	೩೦	೩	೧೯	೯	೩೫	೩	೫
೧೧	೫	೫೯	೫	೩೦	೩	೫೯	೧೦	೨೧	೩	೫೪
೧೨	೬	೦	೫	೨೯	೪	೪೩	೧೧	೧೧	೪	೪೫
೧೩	೬	೦	೫	೨೯	೫	೩೩	ಪ್ರಾತಃ.		೫	೪೧
೧೪	೬	೦	೫	೨೯	೬	೩೦	೧೨	೬	೬	೪೧
೧೫	೬	೧	೫	೨೯	೭	೩೧	೧	೬	೭	೪೪
೧೬	೬	೧	೫	೨೯	೮	೩೫	೨	೯	೮	೪೮
೧೭	೬	೨	೫	೨೯	೯	೩೮	೩	೧೩	೯	೫೦
೧೮	೬	೨	೫	೨೯	೧೦	೪೦	೪	೧೪	೧೦	೪೮
೧೯	೬	೩	೫	೨೯	೧೧	೩೯	೫	೧೨	೧೧	೪೧
									ಮಧ್ಯಾಹ್ನ	
೨೦	೬	೩	೫	೨೯	ಪ್ರಾತಃ.		೬	೫	೧೨	೨೯
೨೧	೬	೪	೫	೨೯	೧೨	೩೪	೬	೫೪	೧	೧೧
೨೨	೬	೪	೫	೨೯	೧	೨೭	೭	೪೧	೧	೫೨
೨೩	೬	೫	೫	೨೯	೨	೧೭	೮	೨೬	೨	೩೨
೨೪	೬	೫	೫	೨೯	೩	೧೦	೯	೧೨	೩	೧೨
೨೫	೬	೬	೫	೨೯	೪	೩	೯	೫೯	೩	೫೩
೨೬	೬	೬	೫	೨೯	೪	೫೭	೧೦	೪೮	೪	೩೭
೨೭	೬	೭	೫	೨೯	೫	೫೩	೧೧	೪೦	೫	೨೬
							ಮಧ್ಯಾಹ್ನ			
೨೮	೬	೭	೫	೩೦	೬	೪೮	೧೨	೩೩	೬	೧೭
೨೯	೬	೮	೫	೩೦	೭	೪೩	೧	೨೭	೭	೧೧
೩೦	೬	೮	೫	೩೦	೮	೩೫	೨	೧೯	೮	೩


ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ		ಉಚ್ಚ		ಅಸ್ತಮಯ	
ಕುಜ		ಹಗಲು		ರಾತ್ರಿ		ಪ್ರಾತಃ.	
		ಘ.	ನಿ.	ಘ.	ನಿ.	ಘ.	ನಿ.
	೭	೪	೧೧	೧೦	೧೮	೪	೨೫
	೧೭	೩	೨೭	೯	೩೪	೩	೪೧
	೨೭	೨	೪೭	೮	೫೪	೩	೧
ಬುಧ		ಪ್ರಾತಃ.		ಮಧ್ಯಾ.		ಸಾಯಂ	
		ಘ.	ನಿ.	ಘ.	ನಿ.	ಘ.	ನಿ.
	೭	೬	೩೨	೧೨	೧೪	೫	೫೬
	೧೭	೫	೭	೧೦	೫೪	೪	೪೧
	೨೭	೪	೪೨	೧೦	೨೯	೪	೧೬
ಗುರು		ರಾತ್ರಿ		ಪ್ರಾತಃ.		ಪ್ರಾತಃ.	
		ಘ.	ನಿ.	ಘ.	ನಿ.	ಘ.	ನಿ.
	೭	೯	೦	೩	೨೨	೯	೪೪
	೧೭	೮	೧೯	೨	೪೧	೯	೩
	೨೭	೭	೩೯	೨	೧	೮	೨೩
ಶುಕ್ರ		ಪ್ರಾತಃ.		ಹಗಲು		ಸಾಯಂ	
		ಘ.	ನಿ.	ಘ.	ನಿ.	ಘ.	ನಿ.
	೭	೫	೩೪	೧೧	೨೨	೫	೧೦
	೧೭	೫	೪೮	೧೧	೩೨	೫	೧೬
	೨೭	೬	೩	೧೧	೪೪	೫	೨೫
ಶನಿ		ಪ್ರಾತಃ.		ಪ್ರಾತಃ.		ಸಾಯಂ	
		ಘ.	ನಿ.	ಘ.	ನಿ.	ಘ.	ನಿ.
	೭	೪	೫೮	೧೦	೫೦	೪	೪೨
	೧೭	೪	೨೪	೧೦	೧೫	೪	೬
	೨೭	೩	೪೯	೯	೪೦	೩	೩೧

1894

DECEMBER

31 DAYS



೧೮೯೪

ದಶಂಬರ

೩೧ ದಿವಸಗಳು

ದಶಂಬರ ೫ ☾ ಶುಕ್ಲಾರ್ಧಚಂದ್ರ, ಸಾಯಂಕಾಲ ಘಂಟೆ ೫ ನಿಮಿಷ ೧೫	ವಿಲಾಯತಿ ಕ್ರಮದ ಚಂದ್ರಸ್ಥಿತಿಗಳು
,, ೧೨ ☺ ಮಾರ್ಗಶಿರ ಪೂರ್ಣಿಮಿ, ರಾತ್ರಿ ,, ೧೨ ,, ೪೫	
,, ೧೯ ☽ ಕೃಷ್ಣಾರ್ಧ ಚಂದ್ರ, ಸಾಯಂಕಾಲ ,, ೪ ,, ೧೫	
,, ೨೭ ● ಮಾರ್ಗಶಿರ ಅಮಾವಾಸ್ಯೆ, ಪ್ರಾತಃಕಾಲ ,, ೭ ,, ೧೯	

ಅಂಗ್ಲ				ಚಾಂದ್ರಮಾನ			ನಕ್ಷತ್ರ		ಸೌರಮಾನ		ಮಹಮ್ಮದಿ	
Date	Day	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ ಪಳಿಗೆ	ನಕ್ಷತ್ರದ ಹೆಸರು	ಘಳಿಗೆ ಪಳಿಗೆ	ಮಾಸ	ದಿನ	ತಿಂಗಳು	ದಿನ
1	S	೧	ಶ	ಮಾರ್ಗಶಿರ ಶುದ್ಧ	೪	೩೫-೪೬	ಉತ್ತರಾಷಾಢ	೬೦- ೦	[ವೃಶ್ಚಿಕ] (ಕಾರ್ತಿಕ) ಮಾಸ	೧೭		೩
2	SUN	೨	ಆ		೫	೪೨- ೫	ಉತ್ತರಾಷಾಢ	೦-೨೭		೧೮		೪
3	M	೩	ಚ		೬	೪೮-೪೯	ಶ್ರವಣಾ	೮- ೫		೧೯		೫
4	Tu	೪	ಮ		೭	೫೫-೧೨	ಧನಿಷ್ಠಾ	೧೫-೪೫		೨೦		೬
5	W	೫	ಬು		೮	೬೦- ೦	ಶತಭಿಷಾ	೨೨-೫೨		೨೧		೭
6	Th	೬	ಗು		೮	೦-೪೩	ಪೂರ್ವಾಭಾದ್ರ	೨೮-೫೦		೨೨		೮
7	F	೭	ಶು		೯	೪-೩೪	ಉತ್ತರಾಭಾದ್ರ	೩೩-೧೧		೨೩		೯
8	S	೮	ಶ		೧೦	೬-೩೨	ರೇವತೀ	೩೫-೩೪		೨೪		೧೦
9	SUN	೯	ಆ		೧೧	೬-೨೩	ಅಶ್ವಿನೀ	೩೫-೫೦		೨೫		೧೧
10	M	೧೦	ಚ		೧೨	೪- ೭	ಭರಣೀ	೩೪-೧೮		೨೬		೧೨
11	Tu	೧೧	ಮ		೧೪	೫೩-೫೮	ಕೃತ್ತಿಕಾ	೩೦-೪೧		೨೭		೧೩
12	W	೧೨	ಬು		☺	೪೬-೪೭	ರೋಹಿಣೀ	೨೫-೫೧		೨೮		೧೪
13	Th	೧೩	ಗು	ಮಾರ್ಗಶಿರ ಬಹುಳ	೧	೩೮-೫೩	ಮೃಗಶಿರಾ	೨೦- ೪		೨೯	ಜಮಾದಿಲಾಖರ್	೧೫
14	F	೧೪	ಶು		೨	೩೦-೩೯	ಆದ್ರಾ	೧೩-೪೪	[ಧನುರ್ಮಾಸ] (ಮಾರ್ಗಶಿರ) ಮಾಸ	೧		೧೬
15	S	೧೫	ಶ		೩	೨೨-೩೧	ಪುನರ್ವಸೂ	೭-೧೭		೨		೧೭
16	SUN	೧೬	ಆ		೪	೧೫-೨೬	ಪುಷ್ಯಾ	೧-೧೫		೩		೧೮
17	M	೧೭	ಚ		೫	೭-೫೬	ಮಘಾ	೫೧-೪೧		೪		೧೯
18	Tu	೧೮	ಮ		೬	೨- ೪	ಹುಬ್ಬಾ	೪೮-೩೫		೫		೨೦
19	W	೧೯	ಬು		೮	೫೪-೧೬	ಉತ್ತರಾ	೪೬-೧೭		೬		೨೧
20	Th	೨೦	ಗು		೯	೫೨-೧೯	ಹಸ್ತಾ	೪೬-೧೩		೭		೨೨
21	F	೨೧	ಶು		೧೦	೫೧-೩೬	ಚಿತ್ರಾ	೪೬-೫೨		೮		೨೩
22	S	೨೨	ಶ		೧೧	೫೧-೫೯	ಸ್ವಾತೀ	೪೮-೩೭		೯		೨೪
23	SUN	೨೩	ಆ		೧೨	೫೩-೨೫	ವಿಶಾಖಾ	೫೧-೨೧		೧೦		೨೫
24	M	೨೪	ಚ		೧೩	೫೭- ೭	ಅನುರಾಧಾ	೫೫- ೨		೧೧		೨೬
25	Tu	೨೫	ಮ		೧೪	೫೯- ೭	ಜ್ಯೇಷ್ಠಾ	೫೯-೩೪		೧೨		೨೭
26	W	೨೬	ಬು		೩೦	೬೦- ೦	ಮೂಲಾ	೬೦- ೦		೧೩		೨೮
27	Th	೨೭	ಗು		●	೩-೨೨	ಮೂಲಾ	೫- ೨		೧೪		೨೯
28	F	೨೮	ಶು	ಪುಷ್ಯ ಶುದ್ಧ	೧	೮-೩೦	ಪೂರ್ವಾಷಾಢ	೧೧-೧೮		೧೫		೩೦
29	S	೨೯	ಶ		೨	೧೪-೨೪	ಉತ್ತರಾಷಾಢ	೧೮-೧೯		೧೬	ರಜಬ	೧
30	SUN	೩೦	ಆ		೩	೨೦-೫೮	ಶ್ರವಣಾ	೨೫-೫೪		೧೭		೨
31	M	೩೧	ಚ		೪	೨೭-೪೪	ಧನಿಷ್ಠಾ	೩೩-೪೪		೧೮		೩

ಯೆಹೋವನನ್ನು ಸ್ತುತಿಸಿರಿ; ಯೆಹೋವನನ್ನು ಆಕಾಶದಿಂದ ಸ್ತುತಿಸಿರಿ; ಸೂರ್ಯ ಚಂದ್ರರೇ, ಆತನನ್ನು ಸ್ತುತಿಸಿರಿ; ಬೆಳಕುಳ್ಳ ಎಲ್ಲಾ ನಕ್ಷತ್ರಗಳೇ, ಆತನನ್ನು ಸ್ತುತಿಸಿರಿ. ಕೀರ್ತ ೧೪೮, ೧. ೩.

1894 DECEMBER—ದಶಂಬರ ೧೮೯೪

ತಾರೀಖು	ಸೂರ್ಯ ಉದಯ ಗಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಗಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಗಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಗಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಗಂಟೆ	ಚಂದ್ರ ಅಸ್ತ ನಿಮಿಷ
					ಪ್ರಾತಃ.		ಹಗಲು		ರಾತ್ರಿ	
೧	೬	೯	೫	೩೦	೯	೨೪	೩	೧೦	೮	೫೭
೨	೬	೯	೫	೩೦	೧೦	೮	೩	೫೭	೯	೪೮
೩	೬	೧೦	೫	೩೧	೧೦	೪೯	೪	೪೨	೧೦	೩೭
೪	೬	೧೧	೫	೩೧	೧೧	೨೬	೫	೨೪	೧೧	೨೪
					ಮಧ್ಯಾನ್ಹ					
೫	೬	೧೧	೫	೩೧	೧೨	೨	೬	೫	ಪ್ರಾತಃ.	
೬	೬	೧೨	೫	೩೧	೧೨	೩೭	೬	೪೫	೧೨	೧೧
೭	೬	೧೨	೫	೩೨	೧	೧೪	೭	೨೭	೧೨	೫೬
೮	೬	೧೩	೫	೩೨	೧	೫೧	೮	೧೦	೧	೪೩
೯	೬	೧೩	೫	೩೨	೨	೩೨	೮	೫೭	೨	೩೧
೧೦	೬	೧೪	೫	೩೩	೩	೧೯	೯	೫೦	೩	೨೪
೧೧	೬	೧೪	೫	೩೩	೪	೧೨	೧೦	೪೭	೪	೨೩
೧೨	೬	೧೫	೫	೩೪	೫	೧೩	೧೧	೫೧	೫	೨೩
೧೩	೬	೧೫	೫	೩೪	೬	೧೮	ಪ್ರಾತಃ.		೬	೨೯
೧೪	೬	೧೬	೫	೩೪	೭	೨೪	೧೨	೫೬	೭	೩೪
೧೫	೬	೧೭	೫	೩೪	೮	೩೦	೨	೧	೮	೩೭
೧೬	೬	೧೭	೫	೩೫	೯	೩೧	೩	೩	೯	೩೪
೧೭	೬	೧೮	೫	೩೬	೧೦	೨೯	೩	೫೯	೧೦	೨೪
೧೮	೬	೧೮	೫	೩೬	೧೧	೨೪	೪	೫೧	೧೧	೧೦
೧೯	೬	೧೯	೫	೩೭	ಪ್ರಾತಃ.		೫	೩೯	೧೧	೫೧
									ಮಧ್ಯಾನ್ಹ	
೨೦	೬	೧೯	೫	೩೭	೧೨	೧೫	೬	೨೫	೧೨	೩೩
೨೧	೬	೨೦	೫	೩೮	೧	೬	೭	೧೦	೧	೧೧
೨೨	೬	೨೦	೫	೩೮	೧	೫೮	೭	೫೬	೧	೫೨
೨೩	೬	೨೧	೫	೩೯	೨	೫೧	೮	೪೪	೨	೩೫
೨೪	೬	೨೧	೫	೩೯	೩	೪೬	೯	೩೪	೩	೨೧
೨೫	೬	೨೨	೫	೪೦	೪	೪೧	೧೦	೨೬	೪	೧೦
೨೬	೬	೨೨	೫	೪೦	೫	೩೫	೧೧	೧೯	೫	೩
							ಮಧ್ಯಾನ್ಹ			
೨೭	೬	೨೨	೫	೪೧	೬	೨೮	೧೨	೧೨	೫	೫೬
೨೮	೬	೨೩	೫	೪೧	೭	೧೯	೧	೪	೬	೫೦
೨೯	೬	೨೩	೫	೪೨	೮	೪	೧	೫೨	೭	೪೧
೩೦	೬	೨೪	೫	೪೨	೮	೪೬	೨	೩೮	೮	೩೨
೩೧	೬	೨೪	೫	೪೩	೯	೨೫	೩	೨೧	೯	೧೯

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ		ಉಚ್ಚ		ಅಸ್ತಮಯ	
ಕುಜ		ಮಧ್ಯಾ.		ಸಾಯಂ		ರಾತ್ರಿ	
		ಘ.	ನಿ.	ಘ.	ನಿ.	ಘ.	ನಿ.
	೭	೨	೧೧	೮	೧೯	೨	೨೭
	೧೭	೧	೪೦	೭	೪೯	೧	೫೮
	೨೭	೧	೧೦	೭	೨೧	೧	೩೨
	೩೧	೧	೦	೭	೧೧	೧	೨೨
ಬುಧ		ಪ್ರಾತಃ.		ಹಗಲು		ಸಾಯಂ	
		ಘ.	ನಿ.	ಘ.	ನಿ.	ಘ.	ನಿ.
	೭	೪	೫೫	೧೦	೩೮	೪	೨೧
	೧೭	೫	೨೦	೧೦	೫೯	೪	೩೮
	೨೭	೫	೪೯	೧೧	೨೬	೫	೩
	೩೧	೬	೨	೧೧	೩೮	೫	೧೪
ಗುರು		ಸಾಯಂ		ರಾತ್ರಿ		ಪ್ರಾತಃ.	
		ಘ.	ನಿ.	ಘ.	ನಿ.	ಘ.	ನಿ.
	೭	೬	೫೧	೧	೧೩	೭	೩೫
	೧೭	೬	೨	೧೨	೨೮	೬	೫೦
	೨೭	೫	೧೬	೧೧	೩೮	೬	೦
	೩೧	೪	೫೮	೧೧	೨೦	೫	೪೨
ಶುಕ್ರ		ಪ್ರಾತಃ.		ಹಗಲು		ಸಾಯಂ	
		ಘ.	ನಿ.	ಘ.	ನಿ.	ಘ.	ನಿ.
	೭	೬	೨೦	೧೧	೫೮	೫	೩೬
	೧೭	೬	೩೭	೧೨	೧೪	೫	೫೧
	೨೭	೬	೫೨	೧೨	೨೯	೬	೬
	೩೧	೬	೫೭	೧೨	೩೫	೬	೧೩
ಶನಿ		ಪ್ರಾತಃ.		ಪ್ರಾತಃ.		ಮಧ್ಯಾ.	
		ಘ.	ನಿ.	ಘ.	ನಿ.	ಘ.	ನಿ.
	೭	೩	೧೪	೯	೫	೨	೫೬
	೧೭	೨	೩೯	೮	೨೯	೨	೧೯
	೨೭	೨	೩	೭	೫೩	೧	೪೩
	೩೧	೧	೪೮	೭	೩೮	೧	೨೮

೧೮೯೪ನೇ ವರ್ಷದ ಸೂಕ್ಷ್ಮನೂತನ ದೃಕ್ಸಿದ್ಧಾಂತ ಪಂಚಾಂಗವು.

ಈ ೧೮೯೪ನೇ ವರ್ಷದ ಆದಿಯಲ್ಲಿ ಚಿತ್ರಾ ನಕ್ಷತ್ರದ ಅಯನಾಂಶವು ಸೂರ್ಯಸಿದ್ಧಾಂತ ಪ್ರಕಾರ ಭಾಗ ೨೨ ಕಲೆ ೨೧ ವಿಕಲೆ ೫೩·೨ ಎಂದೂ, ವರ್ಷದ ಅಂತ್ಯದಲ್ಲಿ ಭಾಗ ೨೨ ಕಲೆ ೨೨ ವಿಕಲೆ ೪೩·೩ ಎಂದು ಗಣಿಸಲ್ಪಟ್ಟದೆ.

ಮಹಾನಕ್ಷತ್ರವೆಂಬ ಸೂರ್ಯನಕ್ಷತ್ರ ಆರಂಭಿಸುವ ಕಾಲ.

ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ	ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ
ಉತ್ತರಾಷಾ.	ಜನವರಿ	೯	ಪ್ರಾತಃ.	೫	ಪುಷ್ಯಾ	ಜುಲಾಯಿ	೧೮	ಹಗಲು	೧೦
ಶ್ರವಣಾ	„	೨೨	„	೯।।।	ಆಶ್ಲೇಷಾ	ಅಗೊಸ್ತು	೧	„	೯
ಧನಿಷ್ಠಾ	ಫೆಬ್ರುವರಿ	೪	ಮಧ್ಯಾಹ್ನ	೧	ಮಘಾ	„	೧೫	ಪ್ರಾತಃ.	೭।
ಶತಭಿಷಾ	„	೧೭	ಸಾಯಂ.	೫	ಹುಬ್ಬಾ	„	೨೯	„	೩
ಪೂರ್ವಾಭಾ.	ಮಾರ್ಚಿ	೨	ರಾತ್ರಿ	೧೧।।।	ಉತ್ತರಾ	ಸಪ್ತಂಬರ	೧೦	ಸಾಯಂ.	೮
ಉತ್ತರಾಭಾ.	„	೧೬	ಪ್ರಾತಃ.	೮	ಹಸ್ತಾ	„	೨೫	ಮಧ್ಯಾಹ್ನ	೧೨
ರೇವತೀ	„	೨೯	ಸಾಯಂ.	೬।।	ಚಿತ್ರಾ	ಒಕ್ಟೋಬರ	೯	ಪ್ರಾತಃ.	೨
ಅಶ್ವಿನೀ	ಎಪ್ರಿಲ್	೧೨	ಪ್ರಾತಃ.	೮।	ಸ್ವಾತೀ	„	೨೨	ಮಧ್ಯಾಹ್ನ	೧೨
ಭರಣೀ	„	೨೫	ರಾತ್ರಿ	೧೨।।	ವಿಶಾಖಾ	ನವಂಬರ	೪	ರಾತ್ರಿ	೮
ಕೃತ್ತಿಕಾ	ಮೇ	೯	ಸಾಯಂ.	೬	ಅನುರಾಧಾ	„	೧೮	ಪ್ರಾತಃ.	೨
ರೋಹಿಣೀ	„	೨೩	ಮಧ್ಯಾಹ್ನ	೨	ಜ್ಯೇಷ್ಠಾ	ದಶಂಬರ	೧	„	೬
ಮೃಗಶಿರಾ	ಜೂನ್	೬	„	೧೨।।	ಮೂಲಾ	„	೧೪	ಹಗಲು	೯
ಆರ್ದ್ರಾ	„	೨೦	ಹಗಲು	೧೧।।	ಪೂರ್ವಾಷಾ.	„	೨೭	„	೧೧।।
ಪುನರ್ವಸೂ	ಜುಲಾಯಿ	೪	„	೧೦।।।					

ದೃಕ್ಸಿದ್ಧ ಸಂಕ್ರಮಣಕಾಲದ ಘಳಿಗೆ ವಿಘಳಿಗೆಗಳು.

(ಸ್ಫುಟ ಸೂರ್ಯೋದಯಾದಿ.)

ತಿಂಗಳು	ತಾರೀಖು	ವಾರ	ಘಳಿಗೆ ವಿಘಳಿಗೆ	ರಾಶಿ	ತಿಂಗಳು	ತಾರೀಖು	ವಾರ	ಘಳಿಗೆ ವಿಘಳಿಗೆ	ರಾಶಿ
ಜನವರಿ	೧೨	ಶುಕ್ರವಾರ	೧೮-೨೦	ಮಕರ	ಜುಲಾಯಿ	೧೪	ಶನಿವಾರ	೪೨-೨೪	ಕರ್ಕಾಟ
ಫೆಬ್ರುವರಿ	೧೦	ಶನಿವಾರ	೫೦- ೮	ಕುಂಭ	ಅಗೊಸ್ತು	೧೫	ಬುಧವಾರ	೩- ೩	ಸಿಂಹ
ಮಾರ್ಚಿ	೧೨	ಚಂದ್ರವಾರ	೪೩-೪೮	ಮೀನ	ಸಪ್ತಂಬರ	೧೫	ಶನಿವಾರ	೨-೪೭	ಕನ್ಯಾ
ಎಪ್ರಿಲ್	೧೨	ಗುರುವಾರ	೫-೫೬	ಮೇಷ	ಒಕ್ಟೋಬರ	೧೫	ಚಂದ್ರವಾರ	೩೨-೩೨	ತುಲಾ
ಮೇ	೧೨	ಶನಿವಾರ	೫೮-೪೧	ವೃಷಭ	ನವಂಬರ	೧೪	ಬುಧವಾರ	೩೧-೩೫	ವೃಶ್ಚಿಕ
ಜೂನ್	೧೩	ಬುಧವಾರ	೧೫-೧೯	ಮಿಥುನ	ದಶಂಬರ	೧೪	ಶುಕ್ರವಾರ	೭-೨೩	ಧನು

ಭೂಸನ್ನಿಕರ್ಷಣ ಭೂವಿಪ್ರಕರ್ಷಣ

ಅಂದರೆ ಚಂದ್ರನು ಭೂಮಿಗೆ ಸಮೀಪ (Perigee) ಮತ್ತು ದೂರ (Apogee) ಇರುವ ಸಮಯ ತಿಳಿಯಲಿಕ್ಕೆ.

ತಿಂಗಳು	ತಾರೀಕು	ಹೊತ್ತು	ಘಂಟೆ	ತಿಂಗಳು	ತಾರೀಕು	ಹೊತ್ತು	ಘಂಟೆ
ಜನವರಿ	೨೦	ಸಾಯಂ.	೮	ಜನವರಿ	೫	ಸಾಯಂ.	೫
ಫೆಬ್ರುವರಿ	೧೮	ರಾತ್ರಿ	೨	ಫೆಬ್ರುವರಿ	೨	ಪ್ರಾತಃ.	೩
ಮಾರ್ಚಿ	೧೭	ಹಗಲು	೧೦	ಮಾರ್ಚಿ	೧	ರಾತ್ರಿ	೯
ಎಪ್ರಿಲ್	೧೧	„	೯	„	೨೯	ಸಾಯಂ.	೬
ಮೇ	೮	„	೯	ಎಪ್ರಿಲ್	೨೬	ಮಧ್ಯಾಹ್ನ	೧
ಜೂನ್	೫	„	೧೧	ಮೇ	೨೪	ಪ್ರಾತಃ.	೫
ಜುಲಾಯಿ	೩	ಸಾಯಂ.	೭	ಜೂನ್	೨೦	ಸಾಯಂ.	೪
ಅಗೊಸ್ತು	೧	ಪ್ರಾತಃ.	೪	ಜುಲಾಯಿ	೧೭	ರಾತ್ರಿ	೮
„	೨೯	ಮಧ್ಯಾಹ್ನ	೧೨	ಅಗೊಸ್ತು	೧೪	„	೧೨
ಸಪ್ತಂಬರ	೨೬	ಹಗಲು	೧೦	ಸಪ್ತಂಬರ	೧೦	ಮಧ್ಯಾಹ್ನ	೧
ಒಕ್ಟೋಬರ	೨೨	ಸಾಯಂ.	೭	ಒಕ್ಟೋಬರ	೮	ಪ್ರಾತಃ.	೭
ನವಂಬರ	೧೭	ಪ್ರಾತಃ.	೨	ನವಂಬರ	೫	„	೩
ದಶಂಬರ	೧೪	ರಾತ್ರಿ	೮	ದಶಂಬರ	೩	„	೪
				„	೩೦	ಸಾಯಂ.	೫

೧೮೯೪ನೇ ವರ್ಷದಲ್ಲಿ ಕುಜಾದಿ ಗ್ರಹಗಳ ರಾಶಿಪ್ರವೇಶಕಾಲಗಳು.

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಯಾವ ರಾಶಿಯಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ನಿ.	
Mars ಕುಜನಿಗೆ	ಜನವರಿ	೧	ಫೆಬ್ರವರಿ	೨	ಮಧ್ಯಾಹ್ನ	೩	೫	ವೃಶ್ಚಿಕದಲ್ಲಿ
	ಫೆಬ್ರವರಿ	೨	ಮಾರ್ಚಿ	೧೭	"	೧	೩೧	ಧನು
	ಮಾರ್ಚಿ	೧೭	ಎಪ್ರಿಲ್	೨೯	ರಾತ್ರಿ	೧	೨೩	ಮಕರ
	ಎಪ್ರಿಲ್	೨೯	ಜೂನ್	೧೧	ಮಧ್ಯಾಹ್ನ	೧	೪೪	ಕುಂಭ
	ಜೂನ್	೧೧	ಜುಲಾಯಿ	೩೧	ರಾತ್ರಿ	೧೨	೪೮	ಮೀನ
	ಜುಲಾಯಿ	೩೧	ನವಂಬರ	೧೦	ಮಧ್ಯಾಹ್ನ	೨	೧೦	ಮೇಷ
	ನವಂಬರ	೧೦	ದಶಂಬರ	೩	ಪ್ರಾತಃಕಾಲ	೬	೫೮	ವಕ್ರಮೀನ
	ದಶಂಬರ	೩	"	೩೧	ಮಧ್ಯರಾತ್ರಿ	೧೨	೦	ಮೇಷದಲ್ಲಿ
Mercury ಬುಧನಿಗೆ	ಜನವರಿ	೧	ಜನವರಿ	೧೯	ಪ್ರಾತಃಕಾಲ	೬	೪೦	ಧನುವಿನಲ್ಲಿ
	"	೧೯	ಫೆಬ್ರವರಿ	೫	ಸಾಯಂಕಾಲ	೭	೫೯	ಮಕರ
	ಫೆಬ್ರವರಿ	೫	"	೨೩	ಪ್ರಾತಃಕಾಲ	೧೦	೧೬	ಕುಂಭ
	"	೨೩	ಮಾರ್ಚಿ	೧೬	ರಾತ್ರಿ	೧೧	೫೩	ಮೀನ
	ಮಾರ್ಚಿ	೧೬	ಎಪ್ರಿಲ್	೯	"	೮	೧	ವಕ್ರಕುಂಭ
	ಎಪ್ರಿಲ್	೯	ಮೇ	೨	"	೧	೭೪	ಮೀನ
	ಮೇ	೨	"	೧೭	ಹಗಲು	೧೧	೧೯	ಮೇಷ
	"	೧೭	"	೩೧	"	೧೦	೫೭	ವೃಷಭ
	"	೩೧	ಜೂನ್	೧೮	ಮಧ್ಯರಾತ್ರಿ	೧೨	೩೭	ಮಿಥುನ
	ಜೂನ್	೧೮	ಅಗೋಸ್ತು	೨೪	"	೧೨	೩೭	ಕರ್ಕಾಟಕ
	ಅಗೋಸ್ತು	೨೪	ಸಪ್ತಂಬರ	೯	ಮಧ್ಯಾಹ್ನ	೩	೩೨	ಸಿಂಹ
	ಸಪ್ತಂಬರ	೯	"	೨೭	ಸಾಯಂಕಾಲ	೮	೪೮	ಕನ್ಯಾ
	"	೨೭	ಒಕ್ಟೋಬರ	೨೧	ಮಧ್ಯಾಹ್ನ	೧	೫೭	ತುಲಾ
	ಒಕ್ಟೋಬರ	೨೧	ನವಂಬರ	೮	ಪ್ರಾತಃಕಾಲ	೯	೨೧	ವೃಶ್ಚಿಕ
	ನವಂಬರ	೮	ದಶಂಬರ	೩	ಮಧ್ಯಾಹ್ನ	೨	೩೬	ವಕ್ರತುಲಾ
	ದಶಂಬರ	೩	"	೨೩	ರಾತ್ರಿ	೧೨	೧೫	ವೃಶ್ಚಿಕ
	"	೨೩	"	೩೧	"	೧೨	೦	ಧನು
Jupiter ಗುರುವಿಗೆ	ಜನವರಿ	೧	ಫೆಬ್ರವರಿ	೫	ರಾತ್ರಿ	೧೨	೫೦	ಮೇಷದಲ್ಲಿ
	ಫೆಬ್ರವರಿ	೫	ಜುಲಾಯಿ	೧೧	ಸಾಯಂಕಾಲ	೪	೩೩	ವೃಷಭ
	ಜುಲಾಯಿ	೧೧	ದಶಂಬರ	೩೧	ರಾತ್ರಿ	೧೨	೦	ಮಿಥುನ
Venus ಶುಕ್ರನಿಗೆ	ಜನವರಿ	೧	ಫೆಬ್ರವರಿ	೨೬	ಮಧ್ಯಾಹ್ನ	೨	೦	ಕುಂಭದಲ್ಲಿ
	ಫೆಬ್ರವರಿ	೨೬	ಮಾರ್ಚಿ	೨೦	ಪ್ರಾತಃಕಾಲ	೮	೪೨	ವಕ್ರಮಕರ
	ಮಾರ್ಚಿ	೨೦	ಎಪ್ರಿಲ್	೨೮	ರಾತ್ರಿ	೯	೫೮	ಕುಂಭ
	ಎಪ್ರಿಲ್	೨೮	ಮೇ	೨೭	ಮಧ್ಯಾಹ್ನ	೧೨	೪೧	ಮೀನ
	ಮೇ	೨೭	ಜೂನ್	೨೨	ರಾತ್ರಿ	೧	೨೫	ಮೇಷ
	ಜೂನ್	೨೨	ಜುಲಾಯಿ	೧೮	"	೯	೩೭	ವೃಷಭ
	ಜುಲಾಯಿ	೧೮	ಅಗೋಸ್ತು	೧೨	ಮಧ್ಯರಾತ್ರಿ	೧೨	೫೭	ಮಿಥುನ
	ಅಗೋಸ್ತು	೧೨	ಸಪ್ತಂಬರ	೫	ಸಾಯಂಕಾಲ	೯	೩	ಕರ್ಕಾಟಕ
	ಸಪ್ತಂಬರ	೫	"	೩೦	ರಾತ್ರಿ	೧೧	೨೬	ಸಿಂಹ
	"	೩೦	ಒಕ್ಟೋಬರ	೨೪	ಮಧ್ಯರಾತ್ರಿ	೧೨	೧೭	ಕನ್ಯಾ
	ಒಕ್ಟೋಬರ	೨೪	ನವಂಬರ	೧೭	ರಾತ್ರಿ	೯	೫೮	ತುಲಾ
	ನವಂಬರ	೧೭	ದಶಂಬರ	೧೨	ಸಾಯಂಕಾಲ	೬	೨೪	ವೃಶ್ಚಿಕ
	ದಶಂಬರ	೧೨	"	೩೧	ಮಧ್ಯರಾತ್ರಿ	೧೨	೦	ಧನು
Saturn ಶನಿಗೆ	ಜನವರಿ	೧	ಎಪ್ರಿಲ್	೭	ಪ್ರಾತಃಕಾಲ	೬	೫೧	ತುಲಾದಲ್ಲಿ
	ಎಪ್ರಿಲ್	೭	ಅಗೋಸ್ತು	೩೦	ಮಧ್ಯರಾತ್ರಿ	೧	೫೭	ವಕ್ರಕನ್ಯಾ
	ಅಗೋಸ್ತು	೩೦	ದಶಂಬರ	೩೧	"	೧೨	೦	ತುಲಾ
Moon's ascending node ರಾಹುವಿಗೆ	ಜನವರಿ	೧	ದಶಂಬರ	೩೧	ಮಧ್ಯರಾತ್ರಿ	೧೨	೦	ಸದಾ ಮೀನದಲ್ಲಿ

೧೮೯೪ನೇ ವರ್ಷದ ಗ್ರಹಣಗಳು.

ಈ ವರ್ಷದಲ್ಲಿ ಸೂರ್ಯಗ್ರಹಣಗಳೆರಡು, ಚಂದ್ರಗ್ರಹಣಗಳೆರಡು, ಬುಧಸಂಕ್ರಮ ಒಂದು; ಇವುಗಳಲ್ಲಿ ಒಂದನೇ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣಗಳೆರಡು ಮಂಗಳೂರಿಗೆ ಗೋಚರವಾಗುವವು. ಉಳಿದ ಸಪ್ಟಂಬರ ೧೫ನೇ ತಾರೀಕಿನ ಚಂದ್ರಗ್ರಹಣ ಮತ್ತು ನವಂಬರ ೧೦ನೇ ಬುಧಸಂಕ್ರಮು ನಮಗೆ ಗೋಚರವಲ್ಲದ ಕಾರಣ ಅವುಗಳನ್ನು ಇದರಲ್ಲಿ ವರ್ಣಿಸಲಿಲ್ಲ.

ಮಂಗಳೂರಲ್ಲಿ ಗಡಿಯಾಲು ಸಾಧಾರಣವಾಗಿ ಮದ್ರಾಸು ಸಮಯದ ಪ್ರಕಾರ ಇಡುತ್ತಾರಾದ ಕಾರಣ ಆ ಸೂಕ್ಷ್ಮವನ್ನು ಗ್ರಹಿಸದಿರುವ ಕೆಲವರು ಈ ಪಂಚಾಗದಲ್ಲಿ ತಪ್ಪುಂಟೆಂದು ಚರ್ಚಿಸಿದರಂತೆ. ಅಂಥಾ ಅನಭಿಜ್ಞದ ತಪ್ಪು ದೂರ ಮಾಡಲಿಕ್ಕಾಗಿ ಇನ್ನು ಮುಂದೆ ಗ್ರಹಣಾದಿಗಳ ವರ್ಣನೆಯಲ್ಲಿ ಮಂಗಳೂರ ಸಮಯ ಮತ್ತು ಮದ್ರಾಸ ಸಮಯ ಕೂಡಾ ಕೊಡಲಿಕ್ಕೆ ನಿಶ್ಚಯಿಸಿದ್ದೇವೆ. (ಹೊಸ ಜ್ಯೋತಿರ್ವೇಧಗಳಿಂದ ಮದ್ರಾಸ ಸಮಯವು ಮಂಗಳೂರ ಸಮಯಕ್ಕಿಂತ ನಿಮಿಷ ೨೧ ಸೆಕುಂದ ೩೬·೯ ಹೆಚ್ಚು ಎಂಬದನ್ನು ಮರೆಯಲಾಗದು.)

೧. ಮಾರ್ಚಿ ೨೧ನೇ ಫಾಲ್ಗುಣ ಪೂರ್ಣಮಿಯು ಬುಧವಾರ ಚಂದ್ರಗೆ ಪಾರ್ಶ್ವಗ್ರಹಣ. ಮಂಗಳೂರ ಸಮಯ ಸಾಯಂಕಾಲ ಘಂಟೆ ೬ ನಿಮಿಷ ೨೫ಕ್ಕೆ ಆಗ್ನೇಯ ಸ್ಪರ್ಶ; ಮಧ್ಯಕಾಲ ಘಂಟೆ ೭ ನಿಮಿಷ ೨೦ಕ್ಕೆ; ಮೋಕ್ಷ ಘಂಟೆ ೮ ನಿಮಿಷ ೧೫ಕ್ಕೆ ನೈಋತ್ಯದಿಂದ.

ಮದ್ರಾಸ್ ಸಮಯವಾದರೆ, ಸ್ಪರ್ಶ ಚಂದ್ರನ ದಕ್ಷಿಣ ಬಿಂದುವಿನಿಂದ ಪೂರ್ವಕ್ಕೆ ಭಾಗ ೧ಲ್ಲಿ ಘ. ೬ ನಿ. ೪೬।।।
,, ಮಧ್ಯಕಾಲ ,, ದಕ್ಷಿಣಕ್ಕೆ ಗ್ರಾಸ ಪ್ರಮಾಣ ಕಾಲು ೧/೪ ” ೭ ” ೪೧।।
,, ಮೋಕ್ಷ ,, ದಕ್ಷಿಣ ಬಿಂದುವಿನಿಂದ ಪಶ್ಚಿಮಕ್ಕೆ ಭಾಗ ೫೯ಲ್ಲಿ ” ೮ ” ೩೬।

೨. ಎಪ್ರಿಲ್ ೬ನೇ ಫಾಲ್ಗುಣ ಅಮಾವಾಸ್ಯೆ ಶುಕ್ರವಾರ ಪ್ರಾತಃಕಾಲದಲ್ಲಿ ಸೂರ್ಯಗೆ ಕಂಕಣಗ್ರಹಣ. ಈ ಗ್ರಹಣದ ಕಂಕಣ ಮಧ್ಯರೇಖೆ ಅರಬಿಸಮುದ್ರದಲ್ಲಿ ಆರಂಭಿಸಿ, ನಮ್ಮ ಜಿಲ್ಲೆಯ ಕಾಸರಗೋಡಿಗೆ ಮುಟ್ಟಿ, ಮುಳಿಯಾರು ಗ್ರಾಮಕ್ಕೆ, ಅಲ್ಲಿಂದ ಪುತ್ತೂರ ತಾಲೂಕು ಕಾವು ಗ್ರಾಮಕ್ಕೆ, ಕುಂದ್ಯಾರುಗ್ರಾಮಕ್ಕೆ, ಕಡಬಕ್ಕೆ, ಮೈಸೂರು ಶೀಮೆಯ ಉತ್ತರ ಭಾಗಕ್ಕೆ ಕೂಡಾ ನಡದು, ವಿಶಾಖಪಟ್ಟಣ (ಪೂರ್ವತೀರ) ದಾಟಿ ಬಂಗಾಳ ಕೊಲ್ಲಿಯಿಂದ (ಕಲ್ಕತ್ತೆಯ ದಕ್ಷಿಣವಾಗಿ) ನಡದು, ಚೀನಕ್ಕೂ ಉತ್ತರ ರುಸ್ಯದ ಹತ್ತರದಿಂದ ಮುಂದೆ ನಡದು ಹೋಗುತ್ತದೆ. ಈ ಗ್ರಹಣವು ಮಂಗಳೂರಿಗೆ ಪೂರ್ಣ ಕಂಕಣವಾಗದಿದ್ದರೂ, ಸೂರ್ಯಬಿಂಬದ (೧/೪೯) ನಾಲ್ವತ್ತೊಂಭತ್ತನೇ ಒಂದು ಪಾಲು ಮಾತ್ರ ಉತ್ತರದಲ್ಲಿ ಕಂಡು ಬರುವದು; ಉಳಿದ ೪೮/೪೯ ಪಾಲು ಸೂರ್ಯ ಕಪ್ಪಾಗುವದು. ಹೀಗಿರುವದರಿಂದ ಶುಮಾರು ಪೂರ್ಣಗ್ರಹಣವೇ ಎಂದು ಆಯಿತು. ಕಾಸರಗೋಡಿನಲ್ಲಿದ್ದು ನೋಡುವವರಿಗೆ ಶುಮಾರು ೨೯ ಸೆಕುಂದ ವರೆಗೆ ಕಂಕಣವಾಗಿ (ಅಂದರೆ ಸೂರ್ಯಬಿಂಬವು ಸುತ್ತಲೂ ಸಪೂರವಾದ ಬೆಳ್ಳಿಯ ಸರಿಗೆಯಂತೆ ಅಥವಾ ಕಿರಣಮಯುವಾದ್ದು) ಕಂಡು ಬರುವದು. ಈ ಸಮಯವು ಮದ್ರಾಸ್ ಘಂಟೆ ೭ ನಿಮಿಷ ೫೭ ಸೆಕುಂದ ೯ ಆಗುತ್ತದೆ. ಮಂಗಳೂರಲ್ಲಿರುವ

ವರಿಗೆ ಸೂರ್ಯನ ಉತ್ತರ ಭಾಗವೆಷ್ಟು ಕಂಡುಬರುವದೋ ಅಷ್ಟೇ ದಕ್ಷಿಣ ದಿಕ್ಕಿನ ಸೂರ್ಯಭಾಗವು ನೀಲೇಶ್ವರದಲ್ಲಿರುವವರಿಗೆ ಕಂಡುಬಂದೀತು. ಈ ಗ್ರಹಣಕ್ಕಾಗಿ ಸಿದ್ಧ ಮಾಡಿಟ್ಟ ಬೇರೆ ಅನೇಕ ಸಂಗತಿಗಳು ನಮ್ಮ ಸಭಾಪತ್ರದಲ್ಲಿ ಕನ್ನಡದಿಂದಲೂ ಕೇರಳೋಪಕಾರಿಯಲ್ಲಿ ಮಲಯಾಳದಿಂದಲೂ ಮುಂದೆ ದೇವಾನುಗ್ರಹದಿಂದ ಕೊಟ್ಟೇವು. ಇಲ್ಲಿ ಅವುಗಳಿಗೆ ಸ್ಥಳವಿಲ್ಲ. ಈ ಗ್ರಹಣವು

ಪ್ರಾತಃಕಾಲ ಸ್ಪರ್ಶ ನೈಋತ್ಯದಿಂದ	ಮಂಗಳೂರು	ಘಂಟೆ ೬-೩೦॥	ಮದ್ರಾಸು	ಘಂಟೆ ೬-೫೨
" ಮಧ್ಯಕಾಲ	"	" ೭-೩೬	,,	,, ೬-೫೮
" ಮೋಕ್ಷಕಾಲ ಈಶಾನ್ಯದಿಂದ	"	" ೮-೪೯॥	,,	,, ೯-೧೧

ಸೂರ್ಯೋದಯಾದಿ ಘಳಿಗೆ ೧-೩೧ಕ್ಕೆ ಸ್ಪರ್ಶ; ಘಳಿಗೆ ೪-೧೮ಕ್ಕೆ ಮಧ್ಯ; ಘಳಿಗೆ ೭-೨೦ಕ್ಕೆ ಮೋಕ್ಷವಾಗುತ್ತದೆ. ಕನ್ನಡ ಜಿಲ್ಲೆಯಲ್ಲಿಯೇ (ಬೇರೆ ಬೇರೆ ಗ್ರಾಮಗಳಲ್ಲಿ) ಇದು ವಿಚಿತ್ರ ತರದ ಗ್ರಹಣವಾಗಿದೆ, ಪರೀಕ್ಷಿಸಿ ನೋಡಿರಿ!

೩. ಸಪ್ತಂಬರ ೧೫ನೇ ಭಾದ್ರಪದ ಪೂರ್ಣಿಮಿಯಲ್ಲಿ ಚಂದ್ರಗ್ರಹಣವು ಅಮೇರಿಕಕ್ಕೆ ಗೋಚರ; ನಮಗೆ ತೋರದು.

೪. ಸಪ್ತಂಬರ ೨೯ನೇ ಭಾದ್ರಪದ ಅಮಾವಾಸ್ಯೆಯು ಶನಿವಾರ ಸೂರ್ಯಗೆ ಪೂರ್ಣಗ್ರಹಣ; ಇದು ಅಫ್ರಿಕದ ಮಧ್ಯಭಾಗದಲ್ಲಿ ಭರತಖಂಡದ ದಕ್ಷಿಣ ಸಮುದ್ರದಲ್ಲಿ ಮಾತ್ರ ಪೂರ್ಣ; ನಮಗೆ ಪಾರ್ಶ್ವಗ್ರಹಣ; ಸೂರ್ಯನ ದಕ್ಷಿಣಭಾಗ ಶುಮಾರು (೧/೪) ನಾಲ್ಕನೆ ಒಂದಂಶ ಕಪ್ಪಾಗುವದು. ಆದ್ಯಂತ ಸಮಯವು ಘಳಿಗೆ ೩ ವಿಘಳಿಗೆ ೪೦.

ನೈಋತ್ಯ ಸ್ಪರ್ಶ	ಪ್ರಾತಃಕಾಲ	ಮಂಗಳೂರು	ಘಂಟೆ ೮	ನಿಮಿಷ	೨೭	ಮದ್ರಾಸ್	ಘಂಟೆ ೮	ನಿಮಿಷ	೪೮॥
ಮಧ್ಯ	,,	,,	,, ೯	,,	೧೭॥	,,	,, ೯	,,	೩೯
ದಕ್ಷಿಣ ಮೋಕ್ಷ	,,	,,	,, ೧೦	,,	೧೨	,,	,, ೧೦	,,	೩೩।

ಗುರು ಶುಕ್ರರ ಅಸ್ತೋದಯಗಳು.

ಶುಕ್ರನ ಅಸ್ತ.— ಫೆಬ್ರವರಿ ೮ನೆಯಿಂದ ೧೯ರ ವರೆಗೆ ೧೨ ದಿವಸ ಶುಕ್ರಾಸ್ತ. ಫೆಬ್ರವರಿ ೨೦ನೆಗೆ ಪ್ರಾಗುದಯ; ಇದು ಶುಕ್ರನ ಅಧೋಭಾಗದ ಅಸ್ತವು. ಗಾಢಾಸ್ತಕಾಲ ಫೆಬ್ರವರಿ ೧೬ ಮಧ್ಯಾನ್ಹ ಘಂಟೆ ೨ ನಿಮಿಷ ೪ಕ್ಕೆ.

ಗುರುವಿನ ಅಸ್ತ.— ಮೇ ೨೧ನೆಯಿಂದ ಜೂನು ೧೯ರ ವರೆಗೆ ೩೦ ದಿವಸ ಗುರು ಅಸ್ತ. ಗಾಢಾಸ್ತವು ಜೂನು ೪ನೇ ಸಾಯಂಕಾಲ ಘಂಟೆ ೭ ನಿಮಿಷ ೧೧ಕ್ಕೆ.

ಶುಕ್ರಾಸ್ತ.— ಒಕ್ಟ್ರೋಬರ ೨೧ನೆಯಿಂದ ೧೮೯೫ನೇ ಇಸವೀ ಜನವರಿ ೨ರ ವರೆಗೆ ಶುಕ್ರನ ಊರ್ಧ್ವ ಭಾಗದ ಅಸ್ತವು. ಗಾಢಾಸ್ತವು ನವಂಬರ ೩೦ನೇ ಸಾಯಂಕಾಲ ಘಂಟೆ೮ ನಿಮಿಷ ೧೭

ಸೂಚನೆ:— ವಾಡಿಕೆಯಾಗಿ ಅಧೋಭಾಗದ ಶುಕ್ರನ ಅಸ್ತ ೧೦ ದಿವಸವೆಂದೂ ಊರ್ಧ್ವಭಾಗದ ಅಸ್ತ ೭೦ ದಿವಸವೆಂದೂ, ಗುರುವಿನ ಅಸ್ತ ೩೦ ದಿವಸವೆಂದೂ ಎಣಿಸುತ್ತಾರೆ. ಆದರೆ ಅದು ಸ್ಥೂಲ ಮಾರ್ಗವಾಗಿದೆ. ಪ್ರತ್ಯಕ್ಷ ಪ್ರಮಾಣಕ್ಕೆ ಗತ್ಯನುಸಾರವಾಗಿ ಒಂದೆರಡು ದಿನಗಳು ಹಿಂದುಮುಂದಾಗುತ್ತವೆ. ನಾವು ಸೂಕ್ಷ್ಮದೃಕ್ಸಿದ್ಧಾಂತ ಪ್ರಕಾರ ಸ್ಫುಟಗಳಿಂದಲೇ ಅಸ್ತಗಳನ್ನು ಗಣಿಸಿ ಕೊಟ್ಟಿರುತ್ತೇವೆ. ಅವುಗಳನ್ನೆಲ್ಲ ಸರಿಯಾದ ಘಡಿಯಾಲುಗಳಿಂದಲೂ ಪ್ರತ್ಯಕ್ಷ ವಿಚಾರದಿಂದಲೂ ತಾಳೆ ನೋಡ ಬಹುದು.

ಸಂವತ್ಸರಫಲವು.

ನಾವು ಈಗ ಪ್ರಜೆಗಳ ಹಿತಚಿಂತಕರಾದ ಅರಸ್ಥಾನದ ಪರಿಪಾಲನೆಯಲ್ಲಿದ್ದೇವೆ. ಮಹಾದೇವರು ಈ ಅರಸ್ಥಾನದ ಪರಿಮುಖವಾಗಿ ನಮಗೆ ಸಮಾಧಾನವನ್ನೂ ನಿರ್ಭಯವನ್ನೂ ದಯೆಪಾಲಿಸಿದ್ದಾನೆ. ಪ್ರಜೆಗಳು ನಿರಕ್ಷರಕುಕ್ಷಿಗಳಾಗಿರದೆ ಬರಹ ಕಲಿತು ತಿಳಿವು ಸಂಪಾದಿಸ ಬೇಕು ಎಂದು ಸರಕಾರದವರು ಶಾಲೆಗಳನ್ನು ಸ್ಥಾಪಿಸಿದ್ದಾರೆ. ಹುಡುಗರು ಬೇರೆ ಬೇರೆ ವಿಷಯಗಳನ್ನು ಶಾಲೆಗಳಲ್ಲಿ ಕಲಿಯುತ್ತಾರೆ. ಭೂಗೋಳ ಶಾಸ್ತ್ರವನ್ನು ಪಠಿಸುವದರಿಂದ, ಹಲವು ದೇಶಗಳನ್ನು ಕಣ್ಣಾರೆ ಕಾಣದಿದ್ದಾಗ್ಯೂ, ಕಂಡಂತೆ ನಮಗೆ ಆ ದೇಶಗಳ ಪರಿಚಿತಿಯಾಗುತ್ತದೆ. ಕೂಪಮಂಡೂಕಗಳಂತೆ ತಮ್ಮ ಊರನ್ನು ಮಾತ್ರ ಬಲ್ಲವರಾಗಿದ್ದವರು ಹೊರಗೆ ಬಂದು ಇತರ ದೇಶಗಳ ವರ್ತಮಾನವನ್ನು ಕೇಳಿ ತಿಳಿಯುವದಕ್ಕೆ ಮನಸ್ಸು ಮಾಡುತ್ತಾರೆ. ಆದ್ದರಿಂದ ಕಳೆದ ವರ್ಷದಲ್ಲಿ ಲೋಕದಲ್ಲಿ ಸಂಭವಿಸಿದ ಮುಖ್ಯ ವೃತ್ತಾಂತಗಳನ್ನು ಪ್ರಸ್ತಾಪಿಸುವೆವು.

ಸರಕಾರದವರು ಹೊಲೆಯರ ನೀಚಾವಸ್ಥೆಯನ್ನು ಮನಸ್ಸಿಗೆ ತಂದು ಹೊಲೆಯ ಹುಡುಗರಿಗಾಗಿ ಶಾಲೆಗಳನ್ನು ಸ್ಥಾಪಿಸುವದಕ್ಕೆ ಅಪ್ಪಣೆ ಮಾಡಿದ್ದಲ್ಲದೆ ಅವರಿಗೆ ಸಾಗುವಳಿ ಬಗ್ಯೆ ಭೂಮಿಯನ್ನು ಕೊಡಿಸ ಬೇಕೆಂದು ಆಲೋಚಿಸಿದ್ದಾರೆ. ಸಕಾರದ ಕಂದಾಯವನ್ನು ತೆರಲಾರದೆ ಉಳಿದ ಕಾರಣದಿಂದ ವರ್ಗದಾರರಿಂದ ಸರಕಾರದವರು ಪಡಕೊಳ್ಳುವ ಭೂಮಿಯು ಹೊಲೆಯರಿಗೆ ಕೊಡಿಸಲಾದೀತಂತೆ. ಚೆಂಗಲಪೇಟೆ ಜಿಲ್ಲೆಯಲ್ಲಿ ಸರಕಾರದ ಸ್ವಾಧೀನದಲ್ಲಿರುವ ಒಂದುವರೆ ಸಾವಿರ ಎಕ್ಕರೆ ಭೂಮಿ ಹಾಗೆ ಕೊಡೋಣಾದೀತು. ಅದೇ ಜಿಲ್ಲೆಯಲ್ಲಿ ಮಿಶನಿನವರು ಹೊಲೆಯರ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳನ್ನು ಇಟ್ಟು, ಅವರು ಸ್ವತಂತ್ರರಾಗಿ ಉಪಜೀವನ ಮಾಡುವದಕ್ಕೆ ಭೂಮಿಯನ್ನೂ ಕೊಡಿಸಿ, ಕ್ರೈಸ್ತಧರ್ಮವನ್ನು ಉಪದೇಶಿಸಿ ಬಹಳ ಸಹಾಯ ಮಾಡುತ್ತಾರೆ.

ಹಿಂದುಸ್ಥಾನದ ನಿಯಮವಿಧಾಯಕ ಸಭೆಯಲ್ಲಿ ಸರಕಾದವರು ಕೆಲವು ಹೊಸ ಕ್ರಮಗಳನ್ನು ಏರ್ಪಡಿಸಿದ್ದಾರೆ. ಸಭೆಯಲ್ಲಿ ನೇಮಕವಾಗ ತಕ್ಕ ದೇಶಸ್ಥರಾದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿದ್ದಲ್ಲದೆ ಸದಸ್ಯರು ರಾಜ್ಯಭಾರದ ಸಂಬಂಧವಾಗಿ ಆಯಾ ಪ್ರಶ್ನೆಗಳನ್ನು ಕೇಳ ಬಹುದು ಎಂದು ಸ್ವತಂತ್ರ ಕೊಟ್ಟಿದ್ದಾರೆ. ಈ ಸ್ವತಂತ್ರ ಕೊಟ್ಟದ್ದರಿಂದಲೂ ಸರಕಾರದಲ್ಲಿ ದೊಡ್ಡದೊಡ್ಡ ಉದ್ಯೋಗಗಳಿಗೆ ದೇಶಸ್ಥರನ್ನು ನೇಮಿಸುವೆವೆಂದು ಸರಕಾರದವರು ವಾಗ್ದಾನ ಮಾಡಿದ್ದರಿಂದಲೂ ನಮ ದೇಶದವರಲ್ಲಿ ಸ್ವಾಮಿಭಕ್ತಿಯೂ ಸಂತುಷ್ಟಿಯೂ ಊರ್ಜಿತವಾಗುವದೆಂಬದಕ್ಕೆ ಸಂದೇಹವಿಲ್ಲಾ. ಮದ್ರಾಸ ಸಂಸ್ಥಾನದಲ್ಲಿ ಅನಂತಪುರ ಕರ್ನೂಲು ಜಿಲ್ಲೆಗಳಲ್ಲಿ ದೇಶಸ್ಥರು ಕಲೆಕ್ಟರ್‌ಸ್ಥಾನಕ್ಕೆ ನೇಮಿಸಲ್ಪಡುವರೆಂದು ವರ್ತಮಾನವದೆ. ಈ ದೊಡ್ಡ ಉದ್ಯೋಗವನ್ನು ಸಂಪಾದಿಸುವದಕ್ಕೆ ವಿದ್ಯಾರ್ಥಿಗಳು ಇಂಗ್ಲಾಂಡಿಕೆ ಹೋಗಿ ಸಿವಿಲ್ ಸರ್ವಿಸ್ ಪರೀಕ್ಷೆ ಕೊಡಬೇಕು. ಅದಕ್ಕೆ ಹತ್ತೊಂಭತ್ತು ಪ್ರಾಯದಲ್ಲಿಯೇ ಸೇರ ಬೇಕೆಂದು ಕ್ರಮವಿತ್ತು.

ಈ ಪ್ರಾಯದ ಅವಧಿಯನ್ನು ಇಪ್ಪತ್ತೆರಡು ವರ್ಷವೆಂದು ಹೊಸ ಕ್ರಮ ಮಾಡಿದ್ದರಿಂದ ವಿದ್ಯಾರ್ಥಿಗಳಿಗೆ ಬಹಳ ಸೌಕರ್ಯವಾಯಿತು. ಹಿಂದುಸ್ಥಾನದ ಸೈನ್ಯಗಳ ಅಧ್ಯಕ್ಷರಾದ ಲಾರ್ಡ್ ರೋಬರ್ಟ್ಸ್ ಸಾಹೇಬರು ಉದ್ಯೋಗವನ್ನು ಬಿಟ್ಟು ವಿಲಾಯತಿಗೆ ತೆರಳಿದರು. ಅವರು ಪಾರುಪತ್ಯದಲ್ಲಿರುವಾಗ ಹಿಂದುಸ್ಥಾನದ ಸೇನಾಬಲವನ್ನು ವೃದ್ಧಿಪಡಿಸಿದರು. ಮಹಾರಾಣಿ ಚಕ್ರವರ್ತಿನಿಯವರು ಅವರ ಬದಲಿಗೆ ಜಾರ್ಜ್ ವೈಟ್ ಸಾಹೇಬರನ್ನು ನೇಮಿಸಿದ್ದಾರೆ. ವಿಲಾಯತಿಯ ಕಿರೀಟಪತಿಗಳು ಹಿಂದುಸ್ಥಾನವನ್ನು ನೋಡ ಬೇಕೆಂದು ಇತ್ತಕಡೆ ಬರುವದು ವಾಡಿಕೆಯದೆ. ಹಾಗೆ ಕಳೆದ ವರ್ಷದಲ್ಲಿ ಆಸ್ತ್ರಿಯ ಯುವರಾಜರು ಇತ್ತಕಡೆಗೆ ಬಂದು ಹೋದರು. ರಾಮೇಶ್ವರದಿಂದ ಸಿಂಹಳ ದ್ವೀಪಕ್ಕೆ ರೈಲುಮಾರ್ಗ ಮಾಡ ಬೇಕೆಂದು ಆಲೋಚನೆಯುಂಟು. ನಡುವೆ ಇರುವ ಮನ್ನಾರಕೊಲ್ಲಿಯಲ್ಲಿ ರಾಮೇಶ್ವರದಿಂದ ಹಿಡಿದು ಸೀಲೋನು ವರೆಗೆ ಬಂಡೆಗಳೂ ಮಳಲಿನ ಕುದುರುಗಳೂ ಇರುವದರಿಂದ ಮಾರ್ಗ ಮಾಡುವದು ಅಸದಳವಲ್ಲಾ. ಸರಕಾರದವರು ಈ ದೇಶದಲ್ಲಿ ತಂತಿಟಪ್ಪಾಲಿನ ಆಫೀಸುಗಳನ್ನು ಕಳದ ವರ್ಷದಲ್ಲಿ ಸುಮಾರು ನೂರರ ವರೆಗೆ ಹೆಚ್ಚು ಮಾಡಿದರು. ಈ ಕಾಲದಲ್ಲಿ ತಂತಿಟಪ್ಪಾಲ ದ್ವಾರಾ ವರ್ತಮಾನಗಳನ್ನು ಕಳಿಸುವದೂ ತರಿಸಿಕೊಳ್ಳುವದೂ ಹೆಚ್ಚು ರೂಢಿಯಾದದರಿಂದ ಪ್ರಜೆಗಳ ಸೌಕರ್ಯಕ್ಕಾಗಿ ಅಂಥಾ ಆಫೀಸುಗಳನ್ನು ಎಲ್ಲಾ ಪಟ್ಟಣಗಳಲ್ಲಿ ಇಡಿಸುವದು ಯೋಗ್ಯವೆಂದು ಸರಕಾರದವರಿಗೆ ಚಿತ್ತವಾಯಿತು. ತಂತಿಟಪ್ಪಾಲಿನಿಂದ ಸರಕಾರಕ್ಕೆ ಖರ್ಚು ಕಳೆದು ತಕ್ಕಷ್ಟು ಹಣ ಉಳಿಯುವದರಿಂದ ವರ್ತಮಾನಗಳನ್ನು ಮುಟ್ಟಿಸುವ ದರವನ್ನು ಕಡಿಮೆ ಮಾಡುವ ಆಲೋಚನೆಯುಂಟಂತೆ. ರೈಲು ಬಂಡಿಗಳಿಂದ ಎಷ್ಟು ದೂರವಾದರೂ ಸುಲಭದಲ್ಲಿ ಪಯಣ ಮಾಡಬಹುದು; ರೈಲು ಮಾರ್ಗದ ಹಾಗೆಯೇ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಟ್ರಾಮ್‌ವೇ ಮಾರ್ಗ ಮಾಡಿ ಕುದುರೆ ಹೂಡಿದ ಬಂಡಿಗಳನ್ನು ಓಡಿಸುತ್ತಾರೆ; ಮುಂಬಾಯಿಗೆ ಹೋಗಿ ಬಂದವರು ಟ್ರಾಮ್‌ವೇ ನೋಡಿರ ಬಹುದು; ಮದ್ರಾಸಿನಲ್ಲಿಯೂ ಟ್ರಾಮ್‌ವೇ ಹಾಕುವದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರಲ್ಲಿ ಬಂಡಿಗಳನ್ನು ವಿದ್ಯುಲ್ಲತೆಯ ಬಲದಿಂದ ಓಡಿಸುವರು; ಇದು ಬಹಳ ನೂತನವಾಗಿರುವದು. ಮಂಗಳೂರಿನಿಂದ ಮೈಸೂರಿಗೆ ರೈಲ್‌ಮಾರ್ಗವಾಗ ಬೇಕೆಂದು ಜನರಲ್ಲಿ ಹೆಚ್ಚು ತಾತ್ಪರ್ಯವಿರುತ್ತದೆ; ಆ ವಿಷಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿಗಳು ಇಂಡ್ಯ ಗವರ್ನಮೆಂಟಿನವರಿಗೆ ಅರ್ಜಿ ಮಾಡಿದ್ದಲ್ಲದೆ ವೈಸರಾಯ ಧೊರೆಗಳು ಮೈಸೂರಿಗೆ ಬಂದಿದ್ದಾಗ್ಯೆ ಅವರ ಸನ್ನಿಧಾನದಲ್ಲಿ ಮುಖತಾ ಅರಿಕೆ ಮಾಡುವದಕ್ಕೆ ಇಲ್ಲಿಂದ ಪ್ರಮುಖ ಗೃಹಸ್ಥರನ್ನು ಮೈಸೂರಿಗೆ ಕಳುಹಿಸಿದ್ದರು. ಹ್ಯಾಗೂ ಕೆಲವು ವರ್ಷಗಳೊಳಗೆ ಇಲ್ಲಿಂದ ಮೈಸೂರು ವರೆಗೆ ರೈಲುಮಾರ್ಗವು ಆಗುವದೆಂದು ಕೋರುತ್ತೇವೆ.

ಮುಂಬಾಯಿಯವಳಾದ ಕೊರ್ನೆಲ್ಯಾ ಸೊರಾಬಜಿ ಎಂಬ ಹೆಣ್ಣುಮಗಳು ಇಂಗ್ಲಿಷ ವಿದ್ಯಾಭ್ಯಾಸ ಮಾಡಿ ಬಿ. ಏ. ವರೆಗೆ ಪರೀಕ್ಷೆಗಳಲ್ಲಿ ತೇರುಗಡೆಪಟ್ಟು, ಇನ್ನು ಹೆಚ್ಚು ವ್ಯುತ್ಪತ್ತಿಯನ್ನು ಪಡೆಯುವದಕ್ಕೆ ಇಂಗ್ಲಾಂಡಿಗೆ ಹೋಗಿದ್ದಳು. ಅಲ್ಲಿ ಅವಳು ಬೇರೆ ಬೇರೆ ಹೆಚ್ಚಿನ ಪರೀಕ್ಷೆಗಳಲ್ಲಿ ತೇರುಗಡೆ ಪಡಲು ಮಹಾರಾಣಿ ಚಕ್ರವರ್ತಿನಿಯವರು ಅವಳ ಕೀರ್ತಿಯನ್ನು ಕೇಳಿ ಸಂತೋಷ ಪಟ್ಟು, ಅವಳನ್ನು ಸನ್ನಿಧಾನಕ್ಕೆ ಕರಿಸಿ

ಮಾತಾಡಿಸಿದರು. ಇನ್ನೊಬ್ಬಳು ಮದ್ರಾಸಿನವಳು ಇಲ್ಲಿ ವೈದ್ಯಪರೀಕ್ಷೆಯಲ್ಲಿ ತೇರುಗಡೆ ಪಟ್ಟು, ಇನ್ನು ಹೆಚ್ಚಾಗಿ ವೈದ್ಯಶಾಸ್ತ್ರವನ್ನು ಅನುಭವ ಮಾಡಿಕೊಳ್ಳುವದಕ್ಕಾಗಿ ಇಂಗ್ಲಾಂಡಿಗೆ ಹೋಗಿದ್ದಾಳೆ. ಸ್ತ್ರೀಯರು ವೈದ್ಯವನ್ನು ಕಲಿಯುವದು ಬಹು ವಿಹಿತವಾಗಿದೆ; ಯಾಕಂದರೆ ಸ್ತ್ರೀಯರು ಅಸ್ವಸ್ಥಕಾಲದಲ್ಲಿ ಅಂಥವರಿಗೆ ಮನಃಪೂರ್ವಕವಾಗಿ ತಮ್ಮ ದೇಹಸ್ಥಿತಿಯನ್ನು ತಿಳಿಸಿ ಚಿಕಿತ್ಸೆ ಮಾಡಿಸಿಕೊಳ್ಳುವದಕ್ಕೆ ಉಪಾಯವಾಗುತ್ತದೆ. ಸುಂದರಾಬಾಯಿ ಎಂಬ ಇನ್ನೊಬ್ಬ ಮುಂಬಾಯಿಯವಳು ಸರಕಾರದವರು ಅಫೀಮಿನ ವ್ಯಾಪಾರವನ್ನು ನಿಲ್ಲಿಸುವಂತೆ ಇಂಗ್ಲಿಷ ಮಹಾನುಭವರೊಂದಿಗೆ ಮಾತಾಡುವದಕ್ಕೂ ಇಂಗ್ಲಾಂಡಿನವರಿಗೆಲ್ಲಾ ಅಫೀಮಿನಿಂದಾಗುವ ಕೆಡಕು ತಿಳಿದು ಬರುವಂತೆ ಭಾಷಣ ಮಾಡುವದಕ್ಕೂ ಇಂಗ್ಲಾಂಡಿಗೆ ಹೋಗಿ ಬಂದಳು. ಹೆಂಗಸರು ಇಂಗ್ಲಿಷು ಕಲಿತು ಇಂಗ್ಲಿಷ ಮಂಡಲಿಯವರ ಮುಂದೆ ಪ್ರಸಂಗಗಳನ್ನು ಮಾಡುವದು ಮಹದಾಶ್ಚರ್ಯವಲ್ಲವೇ. ಕಾಕಿನಾಡು ಅತ್ತಕಡೆಯಲ್ಲಿ ಪ್ರಚಂಡ ತುಫಾನು ಬೀಸಿ, ಗದ್ದೆಗಳಲ್ಲಿರುವ ಪೈರೂ ಕಬ್ಬೂ ಹಾವಳಿಯಾಗಿ ದೊಡ್ಡ ದೊಡ್ಡ ಮರಗಳು ಬಿದ್ದವು. ಕಾಲಿವೆಗಳಿಂದ ನೀರು ಒಳಗೆ ಬಂದು ಊರು ಜಲಮಯವಾಯಿತು. ಹೈದರಾಬಾದಿನಲ್ಲಿ ಕಲ್ಲಿದ್ದಲು ಹೇರಳವಾಗಿ ತೆಗಿಯುತ್ತಾರೆ; ಈ ಇದ್ದಲಿಯನ್ನು ರೈಲ್ ಕಂಪನಿಯುವರು ಹೆಚ್ಚಾಗಿ ಉಪಯೋಗಿಸುತ್ತಾರೆ.

ಉತ್ತರದಲ್ಲಿ ಪಂಜಾಬು ಅತ್ತಕಡೆಯಲ್ಲಿ ಸಿಡುಬುರೋಗವು ಪ್ರಬಲವಾಗಿ ಬಹು ಜನರು ಅದಕ್ಕೆ ಆಹುತಿಯಾದರು. ಕ್ವೇಟಾ ಎಂಬುವಲ್ಲಿ ಐದು ಸಾರಿ ಭೂಕಂಪವು ಉಂಟಾಯಿತು. ಅದರಿಂದ ಒಂದು ಗುಡ್ಡವು ಕುಸಿದು ಬಿದ್ದದ್ದಲ್ಲದೆ ಹೆಚ್ಚು ಕೇಡೇನೂ ಆಗಲಿಲ್ಲಾ. ಕಲ್ಕತ್ತದಲ್ಲಿ ಅಲ್ಪವಾಗಿ ಭೂಕಂಪವು ಉಂಟಾಯಿತು; ಆದರೆ ಮನೆಗಳಿಗೂ ಮನುಷ್ಯರಿಗೂ ಕೆಡಕು ಸಂಭವಿಸಲಿಲ್ಲಾ. ಬಂಗಾಳ ಗವರ್ನಮೆಂಟಿನವರು ಕೋರ್ಟಿನಲ್ಲಿ ನ್ಯಾಯ ವಿಚಾರಣೆಗಳಲ್ಲಿ ಜೂರಿಗಳನ್ನು ನೇಮಿಸುವ ಕ್ರಮವನ್ನು ರದ್ದು ಪಡಿಸಿದ್ದರು. ಬಂಗಾಳದಲ್ಲಿ ಇದನ್ನು ಕುರಿತು ಬಹಳ ಗದ್ದಲವಾಗಿ, ಪ್ರಜೆಗಳು ಇಂಡ್ಯ ಗವರ್ನಮೆಂಟಿಗೂ ರಾಜ್ಯಕರಣಿಕರಿಗೂ ಬಿನ್ನವತ್ತಳೆ ಮಾಡಲಾಗಿ, ಈ ಸಂಗತಿಯನ್ನು ಕೂಲಂಕುಶವಾಗಿ ಪರ್ಯಾಲೋಚಿಸುವ ಬಗ್ಯೆ ಅರಸ್ಥಾನದವರು ಪಂಚಾಯತರನ್ನು ನೇಮಿಸಲಾಗಿ, ಪಂಚಾಯತರು ನ್ಯಾಯವಿಚಾರಣೆಗಳಲ್ಲಿ ಜೂರಿಗಳನ್ನು ನೇಮಿಸುವ ಪೂರ್ವ ಕ್ರಮವನ್ನೇ ಪ್ರಚಾಲಕ್ಕೆ ತರ ಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಿದರು.

ಅಫಘಾನಿಸ್ಥಾನಕ್ಕೂ ಹಿಂದುಸ್ಥಾನಕ್ಕೂ ನಡುವೆ ಕೆಲವರು ಕಂಥಾರಿ ತುಂಡು ಪಾಳೆಗಾರರಿದ್ದಾರೆ; ಅವರು ಹೆಸರಿನ ಪೂರ್ತಿಗೆ ಅಫಘಾನಿ ಅಮೀರನಿಗೆ ವಶವಾಗಿದ್ದು ತಂತಮ್ಮ ಶೀಮೆಯನ್ನು ಸ್ವತಂತ್ರವಾಗಿ ಆಳುತ್ತಾರೆ. ಇವರಿಗೂ ಅಮೀರನಿಗೂ ರಾಜ್ಯದ ಸರಹದ್ದು ಸಂಬಂಧವಾಗಿ ಜಗಳಕ್ಕೆ ಕಾರಣವಾಯಿತು. ಸರಹದ್ದನ್ನು ಸೂಕ್ಷ್ಮವಾಗಿ ನಿಶ್ಚಯಿಸಿ ವಿವಾದವನ್ನು ತೀರಿಸುವ ಬಗ್ಯೆ ಹಿಂದುಸ್ಥಾನದಿಂದ ಪಂಚಾಯತರನ್ನು ಕಳುಹಿಸುತ್ತೇವೆಂದು ಸರಕಾರದವರು ಹೇಳಿದ್ದಕ್ಕೆ ಅಮೀರನು ಒಪ್ಪಿದನು. ಅಫಘಾನಿಸ್ಥಾನದ ಉತ್ತರ ಸರಹದ್ದಿನಲ್ಲಿರುವ ಪಮೀರು ಎಂಬ ಶೀಮೆಗೆ ರುಷ್ಯರು ಒಳನುಗ್ಗಿ ಅದನ್ನು ಕೈವಶ ಮಾಡಿಕೊಳ್ಳ ಬೇಕೆಂಬ ಕೋರಿಕೆಯಲ್ಲಿದ್ದಾ

ರಾಗಿ ತೋರುತ್ತದೆ. ಆದರೆ ಆ ವಿಷಯದಲ್ಲಿ ಇಂಗ್ಲಿಷ ಸರಕಾರದವರಿಗೂ ರುಷ್ಯರಿಗೂ ಸಲ್ಲಾಪ ನಡಿಯುತ್ತದೆ. ಅತ್ತ ಕಡೆಯಿಂದ ಚೀನದವರೂ ರುಷ್ಯರ ಮುಂದೊತ್ತಿ ಬರುವಿಕೆಯನ್ನು ತಡಿಯುವದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಚೀನದವರಿಗೂ ರುಷ್ಯರಿಗೂ ಕಲಹ ಹುಟ್ಟುವಂತೆ ತೋರುತ್ತದೆಂದು ಹೇಳುತ್ತಾರೆ. ಚೀನ ದೇಶದ ಉತ್ತರ ಪ್ರಾಂತದಲ್ಲಿ ಅತಿರೇಕ ಚಳಿಯಿಂದ ಹೇರಳ ಜನರು ಸತ್ತುಹೋದರೆಂದು ಕೇಳುತ್ತೇವೆ. ಚೀನಿಯಲ್ಲಿ ಅರಶಿನ ನದಿ ಎಂಬ ಹೊಳೆಗೆ ನೆರೆ ಬಂದರೆ, ಊರಿಗೆ ನಷ್ಟ ಸಂಭವಿಸುವದು; ಇತ್ತಲಾಗೆ ಆದರಲ್ಲಿ ಭಾರಿ ನೆರೆನೀರು ತುಂಬಿ, ಹನ್ನೆರಡು ಊರುಗಳು ಹಾಳಾದವು. ಚೀನಕ್ಕೆ ಮೂಡಲಲ್ಲಿರುವ ಜಪನ ದೇಶದವರು ಯುರೋಪೀಯರ ಸಂಪರ್ಕಕ್ಕೆ ಬಂದ ಮೇಲೆ ಅವರ ವಿದ್ಯೆಯನ್ನೂ ನಾನಾ ಉದ್ದಿಮೆಗಳನ್ನೂ ಕಲಿತು ನಿಪುಣರಾಗುತ್ತಾರೆ. ಇತ್ತಲಾಗೆ ಅವರು ಬೆಂಕಿಕಡ್ಡಿ ಮಾಡುವ ಕಾರಖಾನೆ ಇಟ್ಟು, ಸ್ವದೇಶಕ್ಕೆ ಸಾಲುವಷ್ಟು ಮಾತ್ರವಲ್ಲಾ, ಹಿಂದುಸ್ಥಾನಕ್ಕೆ ಕಳುಹಿಸಲಿಕ್ಕೆ ಮಿಗುವಷ್ಟು ಬೆಂಕಿಕಡ್ಡಿಗಳನ್ನು ಮಾಡುತ್ತಾರೆ.

ಮಿಸ್ರ ದೇಶದ ಎಳೇ ಪ್ರಾಯದ ಅರಸನಾದ ಖೇದಿವನು ಹೊಸ ಮಂತ್ರಿಯನ್ನು ನೇಮಿಸುವ ಸಂದರ್ಭವಾದಾಗ ಕ್ರಮ ಪ್ರಕಾರ ಇಂಗ್ಲಿಷ ರಾಯಭಾರಿಯ ಅನುಮತಿಯಿಲ್ಲದೆ ಒಬ್ಬನನ್ನು ಆ ಸ್ಥಾನಕ್ಕೆ ಇಟ್ಟನು. ಈ ಕೃತ್ಯವು ಅಪಮಾನಕರವೆಂದು ರಾಯಭಾರಿ ತಿಳಿದು, ಇನ್ನೊಬ್ಬನನ್ನು ನೇಮಿಸುವಂತೆ ಖಂಡಿತವಾಗಿ ಆಜ್ಞಾಪಿಸಿದನು. ಇದು ಫ್ರೆಂಚರಿಗೂ ರುಷ್ಯರಿಗೂ ವಿರೋಧವಾದ್ದರಿಂದ ಅವರು ತುರ್ಕಿಸುಲ್ತಾನನ ಮುಖಾಂತರವಾಗಿ ಖೇದಿವನಲ್ಲಿ ಇಂಗ್ಲಿಷರ ಮೇಲೆ ವೈಮನಸ್ಯವನ್ನು ಹುಟ್ಟಿಸುವದಕ್ಕೆ ಪ್ರಯತ್ನ ಮಾಡಿದರು. ಆದ್ದರಿಂದ ಇಂಗ್ಲಿಷರು ಇಂಗ್ಲಾಂಡಿನಿಂದ ಸೈನ್ಯವನ್ನು ತರಿಸಿದ್ದಲ್ಲದೆ ಹಿಂದುಸ್ಥಾನದಿಂದ ಇಂಗ್ಲಾಂಡಿಗೆ ಹೋಗುವ ಸೈನ್ಯವನ್ನು ಮಿಸ್ರದಲ್ಲಿಯೇ ಇಳಿಸಿದರು. ಇದನ್ನೆಲ್ಲಾ ಖೇದಿವನು ನೋಡಿ ಭಯಪಟ್ಟು, ತಾನು ನೇಮಿಸಿದ ಮಂತ್ರಿಯನ್ನು ತೆಗದು, ಇಂಗ್ಲಿಷರಿಗೆ ಸಮ್ಮತನಾದ ಮಂತ್ರಿಯನ್ನೇ ಇರಿಸಿದ್ದರಿಂದ ಅಲ್ಲಲ್ಲೇ ಸಮಾಧಾನವಾಯಿತು. ಮಿಸ್ರ ದೇಶದಲ್ಲಿ ಇಂಗ್ಲಿಷರು ತಮ್ಮ ಸೈನ್ಯವನ್ನಿರಿಸಿ ಶತ್ರುಗಳ ಅವಾಂತರಗಳನ್ನು ನಿವಾರಿಸಿ, ಕಂದಾಯದ ವ್ಯವಸ್ಥೆಯನ್ನು ನೂತನಪಡಿಸಿದ್ದರಿಂದ ಆ ರಾಜ್ಯವು ತಕ್ಕ ಮಟ್ಟಿಗೆ ಒಳ್ಳೇ ಸ್ಥಿತಿಗೆ ಬಂದದೆ. ಈ ಉಪಕಾರವನ್ನು ಸ್ಮರಣೆ ಮಾಡದೆ ಮಿಸ್ರ ದೇಶದವರಲ್ಲಿ ಒಂದು ಪಕ್ಷದವರು ಒಳಗಿಂದೊಳಗೆ ಇಂಗ್ಲಿಷರ ಮೇಲೆ ವೈಮನಸ್ಸು ಹಿಡಿದಿರುತ್ತಾರೆ. ಪಲೆಸ್ತೀನವೆಂಬುವ ಪುರಾತನ ಯೆಹೂದಿ ದೇಶವನ್ನು ನೋಡುವದಕ್ಕೆ ಅನೇಕರು ಪಯಣ ಮಾಡುತ್ತಾರೆ. ಮತ್ತು ರುಷ್ಯದಿಂದ ಹೊರಗೆ ಹಾಕಿಸಿಕೊಂಡ ಯೆಹೂದಿಯರು ಪಲೆಸ್ತೀನದಲ್ಲಿ ವಸ್ತಿ ಮಾಡುವದಕ್ಕೆ ಹೋಗುತ್ತಾರೆ; ಆದದರಿಂದ ಯಾಫಾ ಎಂಬ ಬಂದರದಿಂದ ಯೆರೂಸಲೇಮು ಪಟ್ಟಣದ ವರೆಗೆ ರೈಲು ಮಾರ್ಗವನ್ನು ಮಾಡಿದ್ದಾರೆ. ಭೂಮಧ್ಯಸಮುದ್ರದಲ್ಲಿ ಇಂಗ್ಲಿಷರ ಯುದ್ಧನಾವೆಗಳು ಎರಡು ಒಂದಕ್ಕೊಂದು ಹೊಡದು ಒಂದು ಹಡಗವು ಕಾಲು ಘಂಟೆಗೊಳಗಾಗಿ ಮುಳುಗಿತು; ಒಳಗಿದ್ದ ೪೦೦ ಜನರು ಸತ್ತುಹೋದರು; ಈ ಭಯಂಕರ ಅಪಾಯದಿಂದ ಇಂಗ್ಲಿಷ ರಾಜ್ಯದಲ್ಲೆಲ್ಲಾ ಸರ್ವರಿಗೂ ವ್ಯಸನವಾಯಿತು.

ಇಂಗ್ಲಾಂಡಿನಲ್ಲಿ ಪಾರ್ಲಿಮೆಂಟು ರಾಜಸಭೆಗೆ ಹೊಸ ಸದಸ್ಯರನ್ನು ಆದುಕೊಂಡದ್ದಾಯಿತು. ಮೊದಲು ಪ್ರಧಾನ ಮಂತ್ರಿಯಾಗಿದ್ದ ಗ್ಲಾಡಸ್ಟನ್ ಸರದಾರರು ಪುನಹಾ ಪ್ರಧಾನ ಮಂತ್ರಿತ್ವಕ್ಕೆ ನೇಮಕ ಪಟ್ಟಿದ್ದಾರೆ. ಪಾರ್ಲಿಮೆಂಟ ಸಭೆಗೆ ಹೊಸ ಸದಸ್ಯರನ್ನು ಆದುಕೊಳ್ಳುವ ವೇಳೆಯಲ್ಲಿ ದಾದಾಭಾಯಿ ನವರೋಜಿ ಎಂಬ ಪಾರಶಿ ಗೃಹಸ್ಥರು ಇಂಗ್ಲಾಂಡಿಗೆ ಹೋಗಿ ಒಂದು ಊರಿನವರು ಅವರನ್ನು ತಮ್ಮ ಕಡೆಯಿಂದ ಪಾರ್ಲಿಮೆಂಟಿಗೆ ನಿಯುಕ್ತರಾಗಿ ಆದುಕೊಳ್ಳುವಂತೆ ಪ್ರಯತ್ನ ಮಾಡಿದರು; ಪ್ರಯತ್ನವು ಸಾಧ್ಯವಾದ್ದರಿಂದ ದಾದಾಭಾಯಿಯವರು ಹಿಂದು ಜನರಲ್ಲಿ ಮೊದಲನೇ ಪಾರ್ಲಿಮೆಂಟಿನ ಸದಸ್ಯರೆನೆಸಿಕೊಳ್ಳುವರು. ಪ್ರಧಾನ ಮಂತ್ರಿಯವರಾದ ಗ್ಲಾಡ್‌ಸ್ಟನ್ ಇವರು ಐರ್ಲಾಂಡ ಶೀಮೆಯವರಿಗೆ ಅವರ ರಾಜ್ಯಭಾರದಲ್ಲಿ ಕೆಲ ಪ್ರತ್ಯೇಕ ಸ್ವತಂತ್ರಗಳನ್ನೂ ಪ್ರತ್ಯೇಕ ಆಲೋಚನೆಸಭೆಯನ್ನೂ ಕೊಡಿಸ ಬೇಕೆಂಬದಾಗಿ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸಿದರು. ಅವರು ಮೊದಲು ಮಂತ್ರಿತ್ವದಲ್ಲಿ ಇದ್ದ ವೇಳೆಯಲ್ಲಿ ಇದೇ ವಿಷಯವನ್ನು ತಂದಾಗ್ಯೆ ಚರ್ಚೆಯಾಗಿ ಅವರ ಮಾತು ನಡಿಯಲಿಲ್ಲಾ. ಈ ಸರ್ತಿಯೂ ಆ ವಿಷಯವನ್ನು ಕುರಿತು ಚರ್ಚೆಯಾಗುತ್ತದೆ. ಸದಸ್ಯರಲ್ಲಿ ಅನೇಕರು ಅದಕ್ಕೆ ಸಮ್ಮತಿ ಪಡುವದಿಲ್ಲ; ಐರ್ಲಾಂಡಿನವರಿಗೆ ಅಂಥಾ ಸ್ವತಂತ್ರವನ್ನು ಕೊಡಿಸುವದರಿಂದ ಕೇಡು ಸಂಭವಿಸುವದೆಂದು ಅನೇಕರ ಅಭಿಪ್ರಾಯವಾಗಿದೆ. ಲಂಡನಿನಲ್ಲಿ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬುವದಾಗಿ ಮಹಾ ಸುಂದರಾಲಯವನ್ನು ಕಟ್ಟಿಸಿದ್ದಾರೆ. ಅದನ್ನು ಪ್ರತಿಷ್ಠೆ ಮಾಡುವಂದು ಚಕ್ರವರ್ತಿನಿಯವರು ಬಂದು, ಹಿಂದು ರಾಜರ ಇತರ ಶ್ರೀಮಂತರ ಮುಂದೆ ರತ್ನಖಚಿತವಾದ ಬೀಗದ ಕೈಯಿಂದ ಮಂದಿರದ ಬಾಗಲನ್ನು ತೆರೆದರು. ಮಂದಿರವನ್ನು ಕಟ್ಟುವ ಖರ್ಚಿಗಾಗಿ ಹಿಂದುರಾಜರೂ ಹಣ ಕೊಟ್ಟಿದ್ದರು. ಹಿಂದುರಾಜರು ಪರದೇಶಗಳಿಗೆ ಪಯಣ ಮಾಡುವದು ಈ ಕಾಲದಲ್ಲಿ ವಾಡಿಕೆಯಾಗಿದೆ. ಬಡೋದೆಯ ಗಾಯಕವಾಡ ಮಹಾರಾಜರೂ ಭಾವನಗರದ ರಾಜರೂ ಇಂಗ್ಲಾಂಡಿಗೆ ಹೋಗಿದ್ದರು. ಇಂಗ್ಲಿಷ ಪ್ರಭುಗಳು ಅವರನ್ನು ಬಹುಮಾನಪುರಸ್ಸರವಾಗಿ ಬರ ಮಾಡಿಕೊಂಡದ್ದಲ್ಲದೆ ಚಕ್ರವರ್ತಿನಿಯವರೂ ಅವರಿಗೆ ಭೇಟಿ ಕೊಟ್ಟರು. ಸಮುದ್ರಪಯಣ ಮಾಡಿ ಮ್ಲೇಛ ದೇಶಗಳಿಗೆ ಹೋದರೆ ಜಾತಿ ಸಂಪರ್ಕಕ್ಕೆ ಆಗದವನಾಗುತ್ತಾನೆಂಬ ಭಯವು ಕಡಿಮೆ ಕಡಿಮೆಯಾಗುತ್ತದೆ; ಮತ್ತು ಪುರಾತನ ಸ್ಮೃತಿಗಳಲ್ಲಿ ಹೇಳಿರುವ ಕಟ್ಟುಕಟ್ಟಳೆಗಳು ಈ ಕಾಲದ ಸ್ವಭಾವಕ್ಕೆ ಅಸಂಗತವಾಗಿವೆ ಎಂದು ಜನರು ಹೆಚ್ಚೆಚ್ಚಾಗಿ ತಿಳಿದುಕೊಳ್ಳುತ್ತಾರೆ. ಬ್ರಾಹ್ಮಣ ವಿದ್ಯಾರ್ಥಿಗಳು ಭಾರಿ ಪರೀಕ್ಷೆಗಳನ್ನು ಕೊಡುವದಕ್ಕೆ ಇಂಗ್ಲಾಂಡಿಗೆ ನಿಶ್ಶಂಕೆಯಾಗಿ ಹೋಗಿ ಬರುತ್ತಾರೆ. ಲಿವರ್ಪೂಲಿನಲ್ಲಿ ಹತ್ತಿಯ ಬಟ್ಟೆಗಳು ಆಗುವ ಕಾರಖಾನೆಗಳು ಬಹಳ ವಿದ್ದಾವೆ; ಅವುಗಳಲ್ಲಿ ಕೆಲಸ ಮಾಡುವ ನೇಯಿಗಾರರು ಸುಮಾರು ಒಂದು ಲಕ್ಷ ಮಂದಿ ಧನಿಗಳು ತಮಗೆ ಕೂಲಿ ಕಡಿಮೆ ಕೊಟ್ಟು ಹೆಚ್ಚು ಹೊತ್ತು ಕೆಲಸ ಮಾಡಿಸುತ್ತಾರೆ, ತಾವು ಕೆಲಸಕ್ಕೆ ಬರುವದಿಲ್ಲವೆಂದು ಹಟ ಮಾಡಿ ಮನೆಯಲ್ಲಿ ಕೂತರು. ಕಡೆಗೆ ಧನಿಗಳಿಗೂ ಊಳಿಗದವರಿಗೂ ಒಪ್ಪುವಂತೆ ಈ ವಿವಾದವನ್ನು ತೀರಿಸಿದ್ದಾಯಿತು. ಈ ರೀತಿಯಲ್ಲಿ ಕೆಲಸಗಾರರು ಒಂದಾನೊಂದು ಕಾರಣದಿಂದ ಧನಿಗಳ ಮೇಲೆ ನಿರಸ ಪಟ್ಟು ಕೆಲಸ ಮಾಡಲೊಲ್ಲೆವೆಂದು ಮುಷ್ಕರ ಹಿಡಿದು ಉಪಟಳ ಮಾಡು

ವದು ವಿಲಾಯತಿಯಲ್ಲಿ ಬಹಳ ನಡಿಯುತ್ತದೆ; ಕೆಲವು ವೇಳೆಗಳಲ್ಲಿ ಧನಿಗಳಿಗೂ ಕೆಲಸದವರಿಗೂ ಸಂಧಾನ ಮಾಡುವದು ಮಹಾ ಪ್ರಯಾಸವಾಗುವದು. ಕೆಲಸಗಾರರು ಹಟ ಮಾಡುವದರಿಂದ ಇತರ ಜನರಿಗೂ ತೊಂದರೆಯುಂಟಾಗುವದು. ಮಹಾರಾಣಿ ಚಕ್ರವರ್ತಿನಿಯವರ ಪ್ರಪೌತ್ರರಾದ ಡ್ಯೂಕ್ ಅಫ್ ಯೊರ್ಕ್ ಇವರು ಪ್ರಿನ್ಸೆಸ್ ಮೇರಿ ಅಫ್ ಟೆಕ್ ರಾಜಕುಮಾರ್ತೆಯನ್ನು ವಿವಾಹವಾದರು; ಇಂಗ್ಲಾಂಡಿನಲ್ಲಿ ಸರ್ವೇ ಸಮಸ್ತರೂ ಈ ವಿವಾಹಕ್ಕೆ ಸಂತೋಷಪೂರಿತರಾದರು.

ಜರ್ಮನಿ ಹೊಲ್ಲಾಂಡು ಮೊದಲಾದ ದೇಶಗಳಲ್ಲಿ ವಾಂತಿಭೇದಿಯು ಭಯಂಕರವಾಗಿ ಪ್ರಬಲವಾಯಿತು; ಹೇರಳ ಜನರು ಅದಕ್ಕೆ ಆಹುತಿಯಾದರು. ಈ ರೋಗವು ಯಾವದರಿಂದ ಬರುತ್ತದೆ ಎಂದು ವೈದ್ಯರು ಶೋಧನೆ ಮಾಡಿದ್ದಾರೆ. ಕುಡಿಯುವ ನೀರಿನ ಅಶುಚಿಯೂ ಮನುಷ್ಯರು ವಸ್ತಿ ಮಾಡುವ ಊರು ಪಟ್ಟಣಗಳಲ್ಲಿ ಕೊಳತು ನಾರುವ ವಸ್ತುಗಳಿಂದ ಹೊರಡುವ ದುರ್ಗಂಧವೂ ವಾಂತಿಭೇದಿಗೆ ಕಾರಣವಾಗುತ್ತದೆಂದು ಹಲವರು ಹೇಳುತ್ತಾರೆ. ನೀರು ನಿರ್ಮಲವಾಗಿದ್ದರೆ, ಪಟ್ಟಣವೂ ಊರೂ ಸ್ವಚ್ಛವಾಗಿದ್ದರೆ, ಆ ರೋಗವು ಉಂಟಾಗಲಾರದಂತೆ. ಅದಲ್ಲದೆ ಸಿಡುಬುರೋಗದ ಸಾರವನ್ನು ಶರೀರದಲ್ಲಿ ಹೊಗಿಸಿದರೆ, ಆ ರೋಗವು ಬರುವದಿಲ್ಲವಷ್ಟೇ; ಆದದರಿಂದ ದಾಕು ಹಾಕಿಸಿಕೊಳ್ಳುವದು ರೂಢಿಯಾಯಿತು. ಹಾಗೆಯೇ ವಾಂತಿಭೇದಿಯ ಸಾರವನ್ನು ಮೈಯಲ್ಲಿ ಚುಚ್ಚಿ ರಕ್ತದೊಳಗೆ ಸೇರಿಸಿದರೆ, ಅದು ಬರುವದಿಲ್ಲವೆಂದು ಒಬ್ಬನು ಪರಿಶೋಧನೆಯಿಂದ ತಿಳಿದು ವಾಂತಿಭೇದಿಯ ಬೀಜವನ್ನು ಸಿದ್ಧ ಮಾಡಿ, ಉತ್ತರ ಹಿಂದುಸ್ಥಾನಕ್ಕೆ ಬಂದಿದ್ದಾನೆ; ಅನೇಕರು ಅದರಿಂದ ತಮಗೆ ದಾಕು ಹಾಕಿಸಿಕೊಂಡಿದ್ದಾರೆ. ಅವರಿಗೆ ವಾಂತಿಭೇದಿಯು ಬಾಧಕ ಮಾಡುವದೋ ಇಲ್ಲವೋ ಇನ್ನು ನೋಡ ಬೇಕು. ಜರ್ಮನಿ ಮಹಾರಾಜರ ಕುಟುಂಬದಲ್ಲಿ ಕನ್ಯಾಜನನವಾದದ್ದು ಅಪರೂಪ; ಸದ್ಯಾ ಮಹಾರಾಣಿಯವರು ಕನ್ನೆಯನ್ನು ಹೆತ್ತದ್ದರಿಂದ ಮಹಾರಾಜರು ಆನಂದ ಪಟ್ಟು, ತಪ್ಪಿತಗಳಿಗಾಗಿ ಮೊದಲನೇ ಸಾರಿ ಸೆರೆಮನೆಯಲ್ಲಿ ಬಿದ್ದ ಹೆಂಗಸರಿಗೆ ಬಿಡುಗಡೆ ಮಾಡಿಸಿದರು.

ಇತಲಿಯಲ್ಲಿ ಪೋಪನು ಪಾದರಿಪಟ್ಟವನ್ನು ಸ್ವೀಕರಿಸಿ ಐವತ್ತು ವರ್ಷಗಳಾದದರಿಂದ ಉತ್ಸವವನ್ನು ಮಾಡಿಸಿದನು. ಹೆಚ್ಚುಕಡಿಮೆ ಮೂವತ್ತು ಸಾವಿರ ಜನರು ಅವನ ಸಂದರ್ಶನಾರ್ಥವಾಗಿ ರೋಮಪುರಿಗೆ ಯಾತ್ರೆ ಮಾಡಿದರು. ಇದಲ್ಲದೆ ಇತಲಿ ರಾಜರು ಮದುವೆಯಾಗಿ ಇಪ್ಪತ್ತೈದು ವರ್ಷಗಳಾದದರಿಂದ ವಿವಾಹದ ನೆನಪಿನ ದಿನದಲ್ಲಿ ಅವರಿಗೆ ಸಾಭಿಮಾನ ಮಾಡುವದಕ್ಕೆ ಮಹಾರಾಣಿ ಚಕ್ರವರ್ತಿನಿಯವರೂ ಜರ್ಮನಿ ಮಹಾರಾಜರೂ ಕೆಲ ಹಿಂದುರಾಜರೂ ಇತಲಿಗೆ ಹೋಗಿದ್ದರು. ಗ್ರೀಸ ರಾಜ್ಯಕ್ಕೆ ಸಮೀಪವಾದ ಜಂತಿ ಎಂಬುವ ದ್ವೀಪದಲ್ಲಿ ಭೂಕಂಪವಾಗಿ ಮನೆಗಳೆಲ್ಲಾ ಬಿದ್ದುಹೋದವು. ಮನೆಮಾರು ಕಳಕೊಂಡು ಧಾವತಿ ಪಡುತ್ತಿದ್ದ ಜನರಿಗೆ ಇಂಗ್ಲಿಷರೂ ಇತಾಲಿಯವರೂ ಗ್ರೀಸ ದೇಶದವರೂ ಯಥೇಷ್ಟವಾಗಿ ತಂಬುಗಳನ್ನೂ ಕಾಳುಕಡಿಯನ್ನೂ ಕಳುಹಿಸಿ ಸಹಾಯ ಮಾಡಿದರು. ಸರ್ದೀನ್ಯ ದ್ವೀಪದಲ್ಲಿ ತುಫಾನು ಬೀಸಿ ಸಮುದ್ರದ ನೀರು ಉಕ್ಕೇರಿ ಒಳಗೆ ಬಂದು ಕೆಲವು ಗ್ರಾಮಗಳು ಮುಳುಗಿ ಹೋಗಿ ನೂರಾರು ಜನರೂ ಹೇರಳ ಪಶುಗಳೂ ನಷ್ಟವಾಗುವದಕ್ಕೆ ಕಾರಣವಾಯಿತು.

ರುಷ್ಯ ಚಕ್ರವರ್ತಿಯವರಿಗೆ ಯಾವಾಗಲೂ ಸಮಾಧಾನವಿಲ್ಲಾ. ಅವರ ಪ್ರಜೆಗಳಲ್ಲಿ ದುಶ್ಮಾನರಾಗಿರುವವರು ಅವರ ಜೀವಹಾನಿ ಮಾಡುವದಕ್ಕೆ ಪ್ರಯತ್ನ ಮಾಡುತ್ತಲೇ ಇದ್ದಾರೆ. ಅವರು ಹೊಗೆಬಂಡಿಯಲ್ಲಿ ಪಯಣ ಮಾಡುವಾಗ ಅವರು ಕೂತಿದ್ದ ಬಂಡಿಯನ್ನು ಹಾರಿಸ ಬೇಕೆಂದು ಮಾರ್ಗದಲ್ಲಿ ಸುರಂಗ ತೋಡಿ ಮದ್ದು ತುಂಬಿಸಿಟ್ಟಿದ್ದರು. ಮಹಾರಾಜರು ಕೂತಿದ್ದ ಬಂಡಿಯು ಭದ್ರವಾಗಿ ದಾಟಿ ಹೋಗಲು ದುಶ್ಮಾನರು ಹಿಂದೆ ಇದ್ದ ಗಾಡಿ ಬರುವಾಗ ಮದ್ದಿಗೆ ಬೆಂಕಿ ಕೊಟ್ಟರು. ಅದರಲ್ಲಿದ್ದ ಕೆಲವು ದೊಡ್ಡ ಹುದ್ದೆದಾರರು ಸತ್ತುಹೋದರು. ಮತ್ತೊಮ್ಮೆ ರುಷ್ಯ ಚಕ್ರವರ್ತಿಯು ಒಂದು ಊರಿಗೆ ಹೋದ್ದಲ್ಲಿ ರೈತರಾದ ಪ್ರಜೆಗಳು ಸಮುದಾಯವಾಗಿ ನೆರೆದು ಬಂದು, ತಮ್ಮ ಅರಿಕೆಯನ್ನು ಲಾಲಿಸ ಬೇಕೆಂದು ಬಿನ್ನಹ ಮಾಡುವಾಗ್ಯೆ ಪರಿವಾರದವರು ಜನರನ್ನು ದೂಡಿದರು. ಮಹಾರಾಜರು ರೈಲು ಬಂಡಿಯಲ್ಲಿ ಪಯಣ ಮುಂದರಿಸುವಾಗ ಜನರು ರೈಲು ಮಾರ್ಗದಲ್ಲಿ ಅಡ್ಡಬಿದ್ದರು. ರೈಲು ನಿಲ್ಲಿಸುವದರೊಳಗಾಗಿ ಹೇರಳ ಜನರು ಚಕ್ರಗಳ ಅಡಿಯಲ್ಲಿ ಘಾಸಿಯಾಗಿ ಹೋದರು. ಬಳಿಕ ಪರಿವಾರದವರಿಗೂ ರೈತರಿಗೂ ಜಗಳವಾಗಿ, ಉಭಯ ಪಕ್ಷಗಳಲ್ಲಿ ಜೀವನಷ್ಟಗಳಾದವು. ಮಹಾರಾಜರು ಇದನ್ನೆಲ್ಲಾ ಕಣ್ಣಾರೆ ಕಂಡು ಕೋಪಾಯಮಾನರಾಗಿ ಮುಂದೆ ಪಯಣವಾದರು. ರುಷ್ಯ ಅರಸ್ಥಾನದವರು ಪ್ರಜೆಗಳ ಹಿತಚಂತನೆಯಲ್ಲಿ ಎಷ್ಟು ತಪ್ಪರರಾಗಿದ್ದಾರೆಂದು ಈ ಸಣ್ಣ ವೃತ್ತಾಂತದಿಂದ ತಿಳಿಯ ಬಹುದು.

ಘನ. ಹೆರ್ಮನ್ ಆನಂದರಾಯ ಕೌಂಡಿನ್ಯ.

ಪಂಚಾಂಗದ ಆರಂಭದಲ್ಲಿ ಒಂದು ತದ್ರೂಪ ಚಿತ್ರವದೆ. ವಾಚಕರಲ್ಲಿ ಹಲವರು ನೋಡಿದ ಕೂಡಲೇ ಇದು ಇಂಥವರ ರೂಪವೆಂದು ಹೇಳುವರು. ಮೋರೆ ಕಂಡು ಗುರುತಿಲ್ಲದವರು ಅದಕ್ಕೆ ಕೆಳಗೆ ಬರೆದ ಬರಹ ನೋಡಿ ಇವರು ಇಂಥವರೆಂದು ತಿಳಿಯುವರು. ಹೆರ್ಮನ್ ಆನಂದರಾಯ ಕೌಂಡಿನ್ಯ ಇವರ ಜನ್ಮಸ್ಥಾನವು ಮಂಗಳೂರು. ಅವರು ಎಳೇ ವಯಸ್ಸಿನಲ್ಲಿ ಪಟ್ಟಣದೊಳಗೆ ಬಾಸಲ್ ಮಿಶನಿನವರು ಸ್ಥಾಪಿಸಿದ ಇಂಗ್ಲಿಷು ಶಾಲೆಯಲ್ಲಿ ಇಂಗ್ಲಿಷು ಕಲಿಯುವದಕ್ಕೆ ಹೋಗುತ್ತಿದ್ದರು. ಶಾಲೆಯಲ್ಲಿ ವಿದ್ಯಾರ್ಥಿಗಳು ವ್ಯಾಕರಣ ಗಣಿತ ಮೊದಲಾದ ಲೌಕಿಕ ವಿಷಯಗಳನ್ನು ಮಾತ್ರವಲ್ಲಾ, ಸತ್ಯ ದೇವರ ಜ್ಞಾನವನ್ನೂ ವಿಮೋಚನೆಯ ಮಾರ್ಗವನ್ನೂ ತಿಳಿದುಕೊಳ್ಳ ಬೇಕೆಂದು ಪ್ರತಿ ದಿನದಲ್ಲಿಯೂ ಮಿಶನೆರಿ ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಸತ್ಯವೇದವನ್ನು ಓದಿಸಿ ಅರ್ಥ ಹೇಳುವರು. ಸತ್ಯವೇದ ಬೋಧನೆಯನ್ನು ಕೇಳುವಾಗ ಕೌಂಡಿನ್ಯ ದೊರೆಯವರಿಗೆ ಆರಂಭದಲ್ಲಿ ವಿರಸವಾಗುವದು. ಉಪಾಧ್ಯಾಯರ ಬೋಧನೆಯನ್ನು ವಿರೋಧಿಸಿ ಸ್ವಮತವನ್ನು ತನಗೆ ತಿಳುವಿಕೆ ಇದ್ದ ಮಟ್ಟಿಗೆ ಪ್ರತಿಪಾದಿಸುತ್ತಿದ್ದರು. ಹೀಗೆ ಕೆಲವು ಕಾಲ ಚರ್ಚೆ ಮಾಡುತ್ತಾ ಮಾಡುತ್ತಾ ದೇವರ ದಯೆಯಿಂದ ಅವರ ಅಂತರಂಗದಲ್ಲಿ ಸತ್ಯಜ್ಞಾನದ ಪ್ರಕಾಶವು ಉದಯವಾಗುವ ಸಮಯವು

ಬಂತು. ಮಳೆಗಾಲದಲ್ಲಿ ಅವರು ಕಠಿಣ ಜ್ವರದಲ್ಲಿ ಬಿದ್ದರು. ಸಂಕಟದಲ್ಲಿ ಮಲಗಿಕೊಂಡಿದ್ದ ವೇಳೆಯಲ್ಲಿ ತನಗೆ ಬಂದ ಅಸ್ವಸ್ಥವು ಪಾಪಕ್ಕೆ ತಕ್ಕ ಶಿಕ್ಷೆಯಾಗಿದೆ ಎಂದು ಅವರಿಗೆ ತಿಳುವಿಕೆಯುಂಟಾಯಿತು. ಅವರು ಕ್ಷೇಮವಾದ ಮೇಲೆ ಮೊದಲಿನಂತೆ ಶಾಲೆಗೆ ಹೋಗಿ ಕಲಿಯುತ್ತಾ ತೆರಪಿರುವಾಗ ಮೇಗ್ಲಿಂಗ್ ದೊರೆಯವರ ಬಳಿಗೆ ಬಂದು, ಯೇಸು ಕ್ರಿಸ್ತನ ಸುವಾರ್ತೆಯನ್ನು ಓದಿ ಅವರಿಂದ ಉಪದೇಶ ಹೊಂದಿಕೊಳ್ಳುತ್ತಿದ್ದರು. ಹೀಗೆ ಕೆಲವು ಕಾಲ ಗತಿಸಿತು; ಸತ್ಯವೇದವೇ ದೇವರು ಪ್ರಕಟಿಸಿದ ಶಾಸ್ತ್ರವು, ಯೇಸು ಕ್ರಿಸ್ತನೇ ವಿಮೋಚಕನು, ಆತನಲ್ಲಿ ವಿಶ್ವಾಸವಿಡುವದರಿಂದಲೇ ದೇವರ ದಯೆಯನ್ನು ಪಡೆಯ ಬಹುದು, ಪಾಪಗಳ ವಿಮೋಚನೆ ಹೊಂದಿ ದೇವರ ಬಾಲಕನಾಗ ಬಹುದು ಎಂಬುವದು ಅವರ ಹೃದಯದಲ್ಲಿ ದೃಢವಾಯಿತು. ಅವರು ತನ್ನ ಮನೋದೃಢವನ್ನು ಇಬ್ಬರು ಸ್ನೇಹಿತರ ಮುಂದೆ ಹೇಳಲು ಅವರು ಅದೇ ಮನಸ್ಸು ಮಾಡಿದವರಾದದರಿಂದ ಮೂವರೂ ಯೇಸು ಕ್ರಿಸ್ತನ ಶಿಷ್ಯರಾಗಿ ಆತನ ನಾಮದಲ್ಲಿ ದಿವ್ಯ ಸ್ನಾನಸಂಸ್ಕಾರವನ್ನು ಸ್ವೀಕರಿಸಿಕೊಳ್ಳ ಬೇಕೆಂದು ನಿರ್ಣಯ ಮಾಡಿ, ಮೇಗ್ಲಿಂಗ್ ದೊರೆಯವರ ಬಂಗಲೆಗೆ ಬಂದರು. ಇದು ೧೮೪೪ನೇ ಇಸವಿ ದಶಂಬರ ತಿಂಗಳಲ್ಲಿ ಸಂಭವಿಸಿತು. ಅವರನ್ನು ಬಲವದ್ಬಂದಿಯಿಂದ ಮನೆಗೆ ವೈಯ ಬೇಕೆಂದು ಅವರ ಕಡೆಯವರು ತಂಡವಾಗಿ ಬಂಗಲೆಗೆ ಬಂದು ಎತ್ತುಗಡೆ ಮಾಡಿದರೂ ಸಾಧ್ಯವಾಗಲಿಲ್ಲಾ. ಮಾರಣೆ ದಿನ ಅವರ ಕಡೆಯವರು ಮಿಶ್ಯನೆರಿಗಳಿಗೆ ಕೆಡಕು ಮಾಡುವದಕ್ಕೆ ತಮ್ಮಿಂದಾಗಲಿಲ್ಲವೆಂದು ನೋಡಿ ಮುಸಲ್ಮಾನರನ್ನು ಮಿಶನೆರಿಗಳ ಮೇಲೆ ಎಬ್ಬಿಸುವ ಬಗ್ಯೆ ಮಹಾಯುಕ್ತಿಯಿಂದ ಮುಖ್ಯ ಮಶೀದಿಯ ಕೆರೆಯಲ್ಲಿ ಹಂದಿಯನ್ನು ಕೊಯಿದು ಹಾಕಿ, ಈ ಕೃತ್ಯವನ್ನು ಮಿಶನೆರಿಯವರ ಕಡೆಯವರು ಮಾಡಿದರೆಂದು ಊರಲ್ಲಿ ಗುಬಾರು ಹುಟ್ಟಿಸಿದರು. ಆಗ ಕನ್ನಡ ಜಿಲ್ಲೆಗೆ ಕಲೆಕ್ಟರರಾಗಿದ್ದ ಬ್ಲೇರ್ ದೊರೆಯವರು ಮುಸಲ್ಮಾನರಲ್ಲಿ ಮುಖ್ಯ ಮುಖ್ಯ ಗೃಹಸ್ಥರನ್ನು ಬಂಗಲೆಗೆ ಕರಸಿ ಮಿಶನೆರಿಯವರು ಆ ಕೃತ್ಯವನ್ನು ಮಾಡಿಸಿದವರಲ್ಲ ಮಾಡಿಸುವವರೂ ಅಲ್ಲಾ ಎಂದು ಅವರೊಂದಿಗೆ ವಿವೇಕದ ಮಾತುಗಳನ್ನಾಡಿ ಅವರನ್ನು ಒಡಂಬಡಿಸಿ ಕಳುಹಿಸಿದ್ದಲ್ಲಿ ಆ ಮುಸಲ್ಮಾನರು ಊರೊಳಗೆ ಬಂದಾಗಲೇ ಗುಬಾರು ತಮ್ಮಳವಾಯಿತು. ಕಡೆಗೆ ಮಶೀದಿಯ ಮುಂದಣ ಕೆರೆಯನ್ನು ಸರಕಾರದವರೇ ಶುದ್ಧ ಮಾಡಿಸಿ ಕೊಟ್ಟರು. ಬಳಿಕ ಕೌಂಡಿನ್ಯ ದೊರೆಯವರೂ ಅವರ ಇಬ್ಬರು ಸ್ನೇಹಿತರೂ ೧೮೪೫ನೇ ಜನವರಿಯಲ್ಲಿ ತ್ರಯೈಕ ದೇವರ ನಾಮದಲ್ಲಿ ಸ್ನಾನಸಂಸ್ಕಾರವನ್ನು ಕೈಕೊಂಡರು. ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ರಾಹ್ಮಣತ್ವವೆಂಬ ಕೋಟೆಯ ಗೋಡೆಯಲ್ಲಿ ದೊಡ್ಡ ಬಿರುಕು ಉಂಟಾಯಿತು; ಕೋಟೆಯೊಳಗಿದ್ದ ಹಲವರು ಯೇಸು ಕ್ರಿಸ್ತನ ಸುವಾರ್ತೆಯ ಬೆಳಕನ್ನು ಅನುಭವಿಸುವದಕ್ಕೆ ಆ ಸಂದಿನೊಳಗಿಂದ ಹೊರಗೆ ಬರುವಂತೆ ಮಾರ್ಗವಾಯಿತು. ಕೆಲವು ಕಾಲದ ಮೇಲೆ ಕೌಂಡಿನ್ಯ ದೊರೆಯವರು ಮೇಗ್ಲಿಂಗ್ ದೊರೆಯವರೊಂದಿಗೆ ಜರ್ಮನಿ ದೇಶಕ್ಕೆ ಹೋಗಿ ಅಲ್ಲಿ ಮಿಶನ್ ವಿದ್ಯಾಲಯದಲ್ಲಿ ಆರು ಏಳು ವರ್ಷ ಇದ್ದು ವಿದ್ಯಾಭ್ಯಾಸ ಮಾಡಿ ೧೮೫೧ರಲ್ಲು ಮಂಗಳೂರಿಗೆ ಬಂದರು. ಅವರು ಪಟ್ಟಣದಲ್ಲಿರುವ ಇಂಗ್ಲಿಷು ಶಾಲೆಯಲ್ಲಿ ಉಪಾಧ್ಯಾಯರಾಗಿದ್ದಾಗ ಅವರಿಂದ ವಿದ್ಯಾಲಾಭ ಪಡೆದವರು ಹಲವರಿದ್ದಾರೆ. ಪ್ರತಿ ಶುಕ್ರವಾರ ಸಾಯಂಕಾಲದಲ್ಲಿ ಪೇಟೆಯಲ್ಲಿ ಉಪದೇಶ

ಮಾಡುವಾಗ ಕೇಳಿದವರೂ ಅವರ ಸಂಗಡ ಚರ್ಚೆ ಮಾಡಿದವರೂ ಬಹು ಜನರಿದ್ದಾರೆ. ಇತ್ತಲಾಗೆ ಹಲವು ವರ್ಷಗಳಿಂದ ಅವರು ಕೊಡಗಿನಲ್ಲಿ ಸ್ವಂತ ತೋಟದಲ್ಲಿರುತ್ತಿದ್ದರು. ಅವರು ನೀಲಗಿರಿಗೆ ಹೋಗಿದ್ದಾಗ ಅಲ್ಲೇ ಇಹಲೋಕದಿಂದ ಪರಲೋಕಕ್ಕೆ ಪಯಣ ಮಾಡಿದರು.

ಹೆಡ್ಡನು ಯಾರು?



ಮೇಲಿನ ಚಿತ್ರದಲ್ಲಿ ಒಬ್ಬನು ಎತ್ತರವಾದ ಮರವನ್ನೇರಿ ಕೊಂಬೆಯನ್ನು ಗರಗಸದಿಂದ ಸಿಗಿಯುವದನ್ನು ಕಾಣ ಬಹುದು. ಆದರೆ ಆ ಮನುಷ್ಯನು ಯಾವ ಕೊಂಬೆ ಸಿಗಿಯುತ್ತಾನೆ? ಎಂದು ಪರಾಮರ್ಶಿಸಿ ನೋಡಿದರೆ, ತಾನು ಯಾವದರ ಮೇಲೆ ಕೂತಿದ್ದಾನೋ ಆ ಕೊಂಬೆಯ ಬುಡವನ್ನೇ ಸಿಗಿಯುತ್ತಾನೆ. ಹೀಗೆ ಸಿಗಿ

ಯುತ್ತಾ ಹೋದರೆ ಏನಾದೀತೆಂದು ಮುಂದಾಗಿ ಹೇಳುವದಕ್ಕೆ ಬಹಳ ಆಲೋಚನೆ ಬೇಡಾ. ಕೊಂಬೆಯು ಬುಡ ಕಡಕೊಂಡು ಬೀಳುವಾಗಲೇ ತಾನೂ ಬಿದ್ದು ಹಾನಿ ಮಾಡಿಕೊಳ್ಳುವನು. ಆದದರಿಂದ ತಾನು ಕೂತ ಕೊಂಬೆಯ ಬುಡವನ್ನು ಸಿಗಿಯು ವವನು ಕೇವಲ ಹೆಡ್ಡನೆಂದು ಎಲ್ಲರೂ ಹೇಳುವರಲ್ಲವೇ? ಲೋಕದಲ್ಲಿ ಯಾವನೂ ಹೀಗೆ ಮಾಡನು, ತಾನು ಕೂತ ಮರದ ಕೊಂಬೆ ಸಿಗಿಯ ಬಾರದೆಂದು ಯೋಚಿಸು ವಷ್ಟು ಬುದ್ಧಿ ಇಲ್ಲದವನು ಯಾವನು? ಎಂದು ವಾಚಕರು ಅಂದಾರು. ಆದರೆ ಲೋ ಕದೊಳಗೆ ಅರಸುತ್ತಾ ಹೋದರೆ, ಇಂಥಾ ಹೆಡ್ಡರಿದ್ದಾರೆ; ಅವರು ತಾವು ಕೂತ ಕೊಂ ಬೆಯ ಬುಡವನ್ನೇ ಛೇದನೆ ಮಾಡುತ್ತಾರೆ; ಕೊಂಬೆಯು ಬೀಳುವಾಗಲೇ ತಾವೂ ಬಿದ್ದು ಹಾನಿ ಮಾಡಿಕೊಂಡೇವು ಎಂಬ ತಿಳಿವು ಅವರಿಗೆ ಇಲ್ಲಾ; ಒಬ್ಬರು ಬುದ್ಧಿ ಹೇಳಿದರೂ ಗ್ರಹಿಕೆಗೆ ತಾರರು. ಇಂಥವರು ಯಾರೆಂದು ತೋರಿಸಿ ಕೊಡುವೆವು.

೧. ಮಧುಪಾನದ ವ್ಯಸನದಲ್ಲಿ ಆಸಕ್ತನಾದವನು ಇಂಥಾ ಹೆಡ್ಡನಾಗಿದ್ದಾನೆ. ಆರಂಭದಲ್ಲಿ ಅಲ್ಪ ಸ್ವಲ್ಪವಾಗಿ ಮಧುಪಾನವನ್ನು ತೆಗದುಕೊಳ್ಳುವದಕ್ಕೆ ಹೋಗು ವನು. ಮೊದಲು ಮಿತಿಯಲ್ಲಿದ್ದರೂ ದಿನಗಳು ಹೋದ ಹಾಗೆ ಕುಡಿಯುವದು ಹೆಚ್ಚಾಗಿ ಮಿತಿ ತಪ್ಪಿ ಅತಿಯಾಗುವದು. ಹಗಲು ರಾತ್ರಿ ಅಮಲಿನಲ್ಲಿಯೇ ಇರು ವನು. ಕೈಯಲ್ಲಿದ್ದ ಹಣವೆಲ್ಲಾ ವೆಚ್ಚವಾದರೂ ಎಚ್ಚರಿಕೆಯಾಗದೆ ಮನೆಯಲ್ಲಿದ್ದ ವಸ್ತು ಒಡವೆಗಳನ್ನೂ ಕಡೆಗೆ ಸರ್ವಸ್ವವನ್ನೂ ಕಳಕೊಳ್ಳುವದಲ್ಲದೆ ತನ್ನ ಬಹುಮಾನ ವನ್ನೂ ಹೋಗಲಾಡಿಸುವನು; ಹೆಂಡತಿ ಮಕ್ಕಳನ್ನೂ ನಿರ್ಗತಿಗಳಾಗಿ ಮಾಡುವನು. ತಾನು ಕೂತ ಕೊಂಬೆಯನ್ನು ಸಿಗಿಯುವವನು ಕೆಳಗೆ ಬಿದ್ದು ಪ್ರಾಣ ಕಳಕೊಳ್ಳು ವಂತೆ ಮಧುಪಾನಿಯು ಸಹ ಜೀವಹಾನಿ ಮಾಡಿಕೊಳ್ಳುವನು. "ಕೆಟ್ಟು ಮುರಿದವ ರಿಗೆಲ್ಲಾ ಗೊಟ್ಟ ಕೆರೆ ತವರುಮನೆ" ಎಂಬುವ ಆದಗತಿ ಅವನಿಗೆ ಒಪ್ಪುವದು. ಆದ ದರಿಂದ ಮಧುಪಾನದ ಆಸಕ್ತಿಗೆ ಒಳಗಾಗಿ ತಾನು ಕೂತ ಕೊಂಬೆಯ ಬುಡವನ್ನು ಕಡಿಯುವ ಅವಿವೇಕಿಯಾಗ ಬೇಡ. ಮಧುಪಾನವು ಮೋಹನವಾಗಿದೆ; ಆರಂಭದಲ್ಲಿ ಸ್ವಲ್ಪ ತೆಗದುಕೊಳ್ಳುತ್ತೇನೆ, ಮಿತಿಯಲ್ಲಿದ್ದೇನೆಂದು ಹೇಳಿದರೂ, ಕಡೆಗೆ ಆ ವ್ಯಸನವೇ ಪ್ರಬಲಗೊಂಡು ನಿನ್ನನ್ನು ಅಧೀನ ಮಾಡುವದು; ನಿನ್ನ ಸ್ವತಂತ್ರವು ಕಳೆದುಹೋಗು ವದು. "ದುಡ್ಡು ಕೊಟ್ಟು ಹಚ್ಚ ಬೇಕು, ಎರಡು ದುಡ್ಡು ಕೊಟ್ಟು ಬಿಡಿಸ ಬೇಕು" ಎಂಬ ಗಾದೆಯಂತೆ ಮಾಡಿದ ಅಭ್ಯಾಸ ಬಿಡುವದು ಅಸದಳವಾಗುತ್ತದೆ. ಆದ ಕಾ ರಣ ಮಧುಪಾನವನ್ನು ಮುಟ್ಟದಿರುವದೂ ಮಧುಪಾನಿಗಳ ಗೋಜಿಗೆ ಹೋಗದಿರು ವದೂ ಲೇಸು. ಪುರಾತನ ಕಾಲದಲ್ಲಿ ಈ ಭರತಖಂಡದಲ್ಲಿ ಮಧುಪಾನವು ಹೆಚ್ಚು ವಾಡಿಕೆ ಇದ್ದದ್ದಾಗಿ ತೋರುತ್ತದೆ. ಯಾದವರು ಸಮುದ್ರದ ದಂಡೆಯಲ್ಲಿ ನೆರೆದು ಧಾರಾಳವಾಗಿ ಮಧುಪಾನ ಮಾಡಿದರೆಂಬದೂ ಅಮಲಿನ ವೇಳೆಯಲ್ಲಿ ಅವರವರೊ ಳಗೆ ಕಲಾಪವಾಗಿ ಒಬ್ಬರನ್ನೊಬ್ಬರು ಹೊಡಕೊಂಡು ಮಡಿದುಹೋದರೆಂಬದೂ ಸರ್ವರಿಗೆ ಗೊತ್ತದೆ. ಆವಾಗ ಕೃಷ್ಣನು ಮಧುಪಾನದಿಂದ ಆದ ಹಾವಳಿಯನ್ನು ಕಂಡು, ಇನ್ನು ಮುಂದೆ ಮಧುಪಾನ ಮಾಡುವವರ ಮೇಲೆ ಶಾಪವಿರಲೆಂದು ಹೇಳಿದ ನೆಂಬದಾಗಿ ಕಥಾಂತರದಲ್ಲಿ ಕಾಣುತ್ತದೆ. ಮತ್ತು ಅಸುರರು ಕಚನೆಂಬವನನ್ನು ಕೊಂದು ಸುಟ್ಟು, ಅವನ ಬೂದಿಯನ್ನು ಸಾರಾಯಿಯಲ್ಲಿ ಬೆರಸಿ ಶುಕ್ರಾಚಾರ್ಯನಿಗೆ

ಕುಡಿಸಿದರೆಂದೂ, ಅಮಲು ಹಿರಿದ ಮೇಲೆ ಈ ಮೋಸವು ಅವನಿಗೆ ತಿಳಿದು ಬರಲು, ಮಧುಪಾನ ಮಾಡುವವನ ಯಾವತ್ತು ಪುಣ್ಯ ನಷ್ಟವಾಗಿ ಅವನು ಬ್ರಹ್ಮಹತ್ಯಕ್ಕೆ ಗುರಿಯಾಗಲೆಂದು ಶಾಪವಿಟ್ಟನೆಂದೂ ಕಥಾಂತರದಲ್ಲಿ ಕಾಣುತ್ತದೆ. ಅಂದಿನಿಂದ ಮಧುಪಾನವು ಈ ದೇಶದಲ್ಲಿ ಕಡಿಮೆಯಾಗುತ್ತಾ ಬಂತಂತೆ. ಪುರಾತನದವರು ಮಧುಪಾನದಿಂದ ಹುಟ್ಟುವ ಹಾವಳಿಯನ್ನು ತಿಳಿದು, ಅದನ್ನು ನಿಷಿದ್ಧ ಪದಾರ್ಥವಾಗಿ ಎಣಿಸಿದರೆಂದು ಮೇಲಿನ ಕಥೆಗಳಿಂದ ತಿಳಿಯ ಬಹುದು. ಆದರೆ ಪೂರ್ವದವರು ನಿಷಿದ್ಧ ಮಾಡಿದ್ದು ಈ ಕಾಲದಲ್ಲಿ ಪುನಹಾ ಪ್ರಚಾಲಕ್ಕೆ ಬರುತ್ತದೋ ಎಂಬುವಂತೆ ತೋರುತ್ತದೆ. ಈ ಮಧುಪಾನರಾಕ್ಷಸನಿಗೆ ಸರ್ವರೂ ವಿರೋಧ ನಿಲ್ಲ ಬೇಕು. ಅದರಿಂದ ದುಡ್ಡುನಷ್ಟ, ಕ್ಷೇಮನಷ್ಟ, ಬುದ್ಧಿನಷ್ಟ, ಮಾನನಷ್ಟವಾಗುವದಲ್ಲದೆ ಬೇರೆ ಪ್ರಯೋಜನವಿಲ್ಲಾ. ಕಡೆಗೆ ಆತ್ಮನಷ್ಟವೂ ಬಂದೇ ಬಂದೀತು.

೨. ಕೂತ ಕೊಂಬೆಯ ಬುಡವನ್ನು ಕಡಿಯುವವನು ಇನ್ನೊಬ್ಬನಿದ್ದಾನೆ. ಅವನು ಯಾರಂದರೆ ಜೂಜಿನ ವ್ಯಸನಕ್ಕೆ ಒಳಗಾದವನು. ಅವನು ಜೂಜಾಡುವದಕ್ಕೆ ಆರಂಭ ಮಾಡಿದಾಗ ಒಂದಕ್ಕೆ ಇಮ್ಮಡಿಯಾಗಿ ಹಣವು ಅವನಿಗೆ ಬಂದಂತೆ ತೋರೀತು; ಆ ಆಶೆಯಿಂದ ಮರುಳಾಗಿ ಎಷ್ಟಾವರ್ತಿ ಸೋತರೂ ಬುದ್ಧಿ ಬಾರದೆ ಮತ್ತೂ ಮತ್ತೂ ಆಡುತ್ತಾ ಕಿವಿಯ ಒಂಟೆ ಸೊಂಟದ ನೇವಾಳ ಮುಂತಾಗಿ ಮನೆಯಲ್ಲಿದ್ದ ಒಡವೆಗಳನ್ನೆಲ್ಲಾ ಒತ್ತೆ ಇಟ್ಟು ಆಡಿ ಇಟ್ಟಷ್ಟೂ ಕಳಕೊಂಡು ಕಾಕತ್ರನಾಗುವನು. ಅದರೊಂದಿಗೆ ತನ್ನ ಬಹುಮಾನವನ್ನೂ ಸಭ್ಯತ್ವವನ್ನೂ ಕಳಕೊಳ್ಳುವನು; ಜುಗಾರ ಖೋರ ಅನ್ನಿಸಿಕೊಳ್ಳುವನು. ಜೂಜಾಡುವವರೊಳಗೂ ಪರಸ್ಪರ ವಿರುದ್ಧಗಳು ಹುಟ್ಟಿ ನಾನಾ ಕೆಡಕುಗಳಿಗೆ ಕಾರಣವಾಗುವದು. ಜೂಜಾಟವೂ ಬಲವತ್ತರವಾದ ಮೋಹನವಾಗಿದೆ; ಕೈಯಲ್ಲಿ ದುಡಿದ್ದು ಅಂಥಾ ಸ್ಥಳಕ್ಕೆ ಹೋದರೆ, ದುಡ್ಡಿಟ್ಟು ಆಡಲೇ ಬೇಕೆಂದು ಮನಸ್ಸು ಬರುವದು; ಒಮ್ಮೆ ಗೆಲವು ಆದರೆ ಮೋಹನವು ತಲೆಗೇರುವದು; ಹೀಗೆ ಎಷ್ಟೋ ಮಂದಿ ಜೂಜಾಡುವಲ್ಲಿಗೆ ಮೊದಲನೇ ಸಾರಿ ಹೋದವರು ದುಡ್ಡೆಲ್ಲಾ ಹೋಗಲಾಡಿಸಿಕೊಂಡು ಕಡೆಗೆ ಅತ್ತದ್ದುಂಟು. ಆದ್ದರಿಂದ ಜೂಜುಗಾರರ ಗಾಳಿಗೆ ಹೋಗ ಬಾರದು. ಒಮ್ಮೆ ಆಡುವದು ಅಭ್ಯಾಸವಾದರೆ, ಕೈಗೆ ದುಡ್ಡು ಸಿಕ್ಕಿದ ಕೂಡಲೇ ಅಲ್ಲಿಗೆ ಹೋಗ ಬೇಕೆಂದು ಮನಸ್ಸು ಎಳಿಯುತ್ತದೆ. ಈ ವ್ಯಸನಕ್ಕೆ ಒಳಪಟ್ಟು ಕೂತ ಕೊಂಬೆಯ ಬುಡವನ್ನೇ ಕಡಿಯುವ ಹೆಡ್ಡನಾಗ ಬೇಡ; ಜುಗಾರು ಆಡಿ ಏಳಿಗೆಯಾದವರು ಯಾರಾದರೂ ಇದ್ದಾರೇ?

೩. ಹಿರಿಯರು ಗಳಿಸಿಟ್ಟ ಆಸ್ತಿಯನ್ನು ಜೋಕೆ ಮಾಡದೆ ಮನಸ್ಸೋಇಚ್ಛೆಯಾಗಿ ಖರ್ಚು ಮಾಡುವ ದುಂದುಗಾರನೂ ತಾನು ಕೂತ ಕೊಂಬೆಯನ್ನು ಛೇದಿಸುವ ಹೆಡ್ಡನಿಗೆ ಸಮಾನನಾಗಿದ್ದಾನೆ. ಹಿರಿಯರು ಎಷ್ಟು ಧಾವತಿಯಿಂದ ಹಣ ಗಳಿಸಿದರೆಂದು ಅವನು ಅರಿಯನು; ಚಿಕ್ಕಂದಿನಿಂದ ಕಷ್ಟ ಮಾಡುವ ಅನುಭವವಿಲ್ಲದವನಾಗಿ ಹಣದ ಬೆಲೆಯನ್ನೂ ಅರಿಯನು. ಯೌವನಮದದಿಂದ ಕಣ್ಣು ಕಾಣದೆ ಕಂಡದ್ದೆಲ್ಲಾ ಕೊಳ್ಳುತ್ತಾ ಆಗಭೋಗಗಳಲ್ಲಿ ನಿಮಗ್ನನಾಗಿ ಹಣ ವೆಚ್ಚ ಮಾಡುವನು. "ಕೂತು ಉಂಬುವನಿಗೆ ಕುಡಿಕೆ ಹಣ ಸಾಲದು" ಎಂಬ ಗಾದೆಯ ಪ್ರಕಾರ ಕೈಯಲ್ಲಿದ್ದ ದ್ರವ್ಯವೆಲ್ಲಾ ತಿಳಿಯದಲೇ ಹಾರಿಹೋಗುವದು. ಕಡೆಗೆ ಲಕ್ಷಾಪತಿ ಹೋಗಿ ಭಿಕ್ಷಾ

ಪತಿಯಾಗುವನು. ಕೆಟ್ಟು ಮುರಿದ ಮೇಲೆ ಬುದ್ಧಿ ಬಂದು ಪ್ರಯೋಜನವೇನು? ನಷ್ಟವಾದದ್ದು ಪುನಹಾ ಕೈಗೆ ಸಿಕ್ಕುವದೋ? ಆದ್ದರಿಂದ ದ್ರವ್ಯವನ್ನು ಸದ್ವಯ ಮಾಡ ಬೇಕು; ಪರೋಪಕಾರಕ ಕೃತ್ಯಗಳಿಗೆ ಉಪಯೋಗಿಸ ಬೇಕು. ತನಗಾಗಿಯೂ ತನ್ನವರಿಗಾಗಿಯೂ ಮುಂದಣ ಆಲೋಚನೆ ಇಟ್ಟು ದುಂದೌತನಕ್ಕೆ ಒಳಪಡದೆ ಮಿತವ್ರಯ ಮಾಡುವವನಾಗಿರ ಬೇಕು. ಇದರಲ್ಲಿ ದೇವರ ಆಶೀರ್ವಾದವದೆ. ಮತ್ತು ಉಂಡಾಡಿಗನಾಗಿ ಅಡ್ಡಾಡುತ್ತಾ ಮನೆಯಲ್ಲಿದ್ದದ್ದನ್ನು ತಿಂದು ಸರಿ ಮಾಡುವದಲ್ಲಾ, ಕಾಯಕಷ್ಟ ಮಾಡುವದು ಶರೀರಕ್ಕೂ ಮನಸ್ಸಿಗೂ ಹಿತವಾಗಿದೆ. ಥಾವತಿ ಮಾಡುವದರಿಂದ ಆಲಸ್ಯವೇ ಮೊದಲಾದ ರೋಗರುಜನೆಗಳು ದೂರವಾಗಿ ಹಲವು ವಿಧದ ಪಾಪದ ಮಾರ್ಗಗಳಿಗೂ ತಪ್ಪಿಸಿಕೊಳ್ಳ ಬಹುದು. ನಾವು ಕಷ್ಟ ಮಾಡಿ ನಮ್ಮ ದಿನದಿನದ ಆಹಾರವನ್ನು ದುಡಿಯ ಬೇಕು. ಇದು ದೇವರು ಮಾಡಿದ ಅಪ್ಪಣೆ.

೪. ವಿಷಯಲಂಪಟನಾಗಿ ಪರಸ್ತ್ರೀಯರನ್ನು ಕಾಮಿಸುವವನೂ ವೇಶ್ಯೆಗಳ ಸಂಸರ್ಗ ಮಾಡುವವನೂ ಸಹ ತಾನು ಕೂತ ಕೊಂಬೆಯನ್ನೇ ಛೇದಿಸುವ ಹೆಡ್ಡನಾಗಿದ್ದಾನೆ. ಮನುಷ್ಯನು ಮಾಡುವ ಪಾಪಗಳೆಲ್ಲಾ ಶರೀರಕ್ಕೆ ಹೊರಗೆ ಅವೆ; ಆದರೆ ಪಾರದಾರ ಮಾಡುವವನು ತನ್ನ ಶರೀರವನ್ನೇ ಕೆಡಿಸುವ ಪಾಪ ಮಾಡುತ್ತಾನೆಂದು ಪೌಲ ಅಪೊಸ್ತಲನು ಹೇಳಿದ್ದಾನೆ. ಸ್ತ್ರೀವ್ಯಸನಿಯು ಹಣವನ್ನು ಕಳಕೊಳ್ಳುವದಲ್ಲದೆ ದೇಹದ ಧಾತುವನ್ನು ಕಳಕೊಂಡು ಬಲಹೀನನೂ ನಿತ್ಯ ರೋಗಿಯೂ ಆಗುವನು, ಎಳೇ ವಯಸ್ಸಿನಲ್ಲಿ ಮುದುಕನಂತಿರುವನು, ಕಡೆಗೆ ಜನರಲ್ಲಿದ್ದ ಬಹುಮಾನವನ್ನು ಕಳಕೊಳ್ಳುವನು. ದೇಹದ ಕ್ಷೇಮವೇ ಕೆಟ್ಟುಹೋದ ಮೇಲೆ ಮಿಕ್ಕ ಆಸ್ತಿ ಎಷ್ಟಿದ್ದರೂ ಪ್ರಯೋಜನವೇನು? ಆದ್ದರಿಂದ ಜಾರತ್ವವನ್ನು ಬಿಟ್ಟು ಓಡಿಹೋಗು ಎಂದು ಪೌಲ ಅಪೊಸ್ತಲನು ಎಚ್ಚರಿಸಿದ್ದಾನೆ. ಲಂಡ ಗೆಳೆಯರನ್ನು ಕೂಡಿಕೊಂಡು ಕೆಟ್ಟ ಮನೆಗಳಿಗೆ ಹೋಗ ಬೇಡಾ, ಅಂಥವರ ಒಡನಾಟವನ್ನೇ ಬಿಟ್ಟುಬಿಡು. ಹೊಲಸು ಬಂಡು ಸಂಭಾಷಣೆ ಮಾಡ ಬೇಡಾ; ಕಾಮೋದ್ರೇಕ ಮಾಡುವ ಪುಸ್ತಕಗಳನ್ನು ಓದ ಬೇಡಾ. ದೇವರಿಗೆ ಭಯ ಪಟ್ಟು ಮನೋವಾಕ್ಕಾಯುಗಳಲ್ಲಿ ಶುಚಿತ್ವವನ್ನು ಕಾಪಾಡು. ಹೀಗಿದ್ದರೆ ದೇವರ ಆಶೀರ್ವಾದಕ್ಕೆ ಪಾತ್ರನಾಗುವಿ.

೫. ಈ ಲೋಕದ ಸುಖದಲ್ಲಿಯೇ ನಿಮಗ್ನನಾಗಿ ಪರದ ವಿಷಯವಾಗಿಯೂ ಅಮರ್ತ್ಯವಾಗಿರುವ ಆತ್ಮದ ವಿಷಯವಾಗಿಯೂ ನಿಶ್ಚಿಂತನಾಗಿ ಕಾಲಹರಣೆ ಮಾಡುವವನೂ ಸಹ ತಾನು ಕೂತ ಕೊಂಬೆಯ ಬುಡವನ್ನು ಛೇದಿಸುವವನೇ. ಅವನು ದ್ರವ್ಯವಂತನಾದರೆ ಉಣ್ಣುತ್ತಾ ಕುಡಿಯುತ್ತಾ ಆರಾಮವಾಗಿರುವದಕ್ಕೂ, ಬಡವನಾದರೆ ಗೇಣುದ್ದ ಹೊಟ್ಟೆಗಾಗಿಯೂ ಬಟ್ಟೆಗಾಗಿಯೂ ಕಷ್ಟ ಮಾಡುವದಕ್ಕೂ ತಾನು ಈ ಲೋಕದಲ್ಲಿದ್ದೇನೆಂದು ನೆನಸುತ್ತಾನೆ. ತಾನು ಈ ಲೋಕವನ್ನು ಬಿಟ್ಟುಹೋಗುವ ಕಾಲ ಬರುವದು, ಆವಾಗ್ಯೆ ತನಗೆ ಗತಿ ಏನು ಎಂಬುವ ಯೋಚನೆ ಅವನಲ್ಲಿ ಬರುವದಿಲ್ಲಾ. ಕೂತ ಕೊಂಬೆಯನ್ನು ಕಡಿಯುವವನು ಆ ಕೊಂಬೆ ಮುರಿದು ಬೀಳುವಾಗ ಬೆಚ್ಚಿ ತಲ್ಲಣಗೊಂಡು ಹಿಡಿಯುವದಕ್ಕೂ ನಿಲ್ಲುವದಕ್ಕೂ ಆಶ್ರಯುವಿಲ್ಲದೆ ಇರುವಂತೆ ಇವನು ಮರಣಕಾಲ ಹತ್ತರ ಬರಲು ಕಳವಳಗೊಳ್ಳುವನು, ತನ್ನನು ನಷ್ಟಪಡುವನು. ಅಯ್ಯೋ ಭಯಂಕರ ಸಂಗತಿ! ಅವಸಾನದಲ್ಲಿ ಬುದ್ಧಿ ಬಂದು

ಪ್ರಯೋಜನವೇನು? "ಬಾಯಿಯಾರಿದಾಗ ಬಾವಿ ತೋಡುವದೇ?" ಇಂದೇ ಸುದಿನವೆಂದು ತಿಳಿದುಕೋ. ನಾಳೆಯ ದಿನವು ನಿನ್ನದೋ ನೀನು ಅರಿಯೆ. ಹೊಸ ಮಡಿಕೆಯಲ್ಲಿಟ್ಟ ನೀರು ತೊಟ್ಟು ತೊಟ್ಟಾಗಿ ಸೋರುವಂತೆ ನಿನ್ನ ಆಯುಷ್ಯವು ಗತಿಸಿಹೋಗುವದನ್ನು ನೆನಸು.

ವಾಚಕನೇ, ನಾನು ಕುಡಿಕನಲ್ಲಾ, ದುಂದುಗಾರನಲ್ಲಾ, ಜೂಜಾಳಿಯಲ್ಲಾ ಎಂದು ನೀನು ಹೇಳ ಬಹುದು. ಆದರೆ ನೀನು ಇಹವನ್ನು ನೆಚ್ಚಿ ಪರವನ್ನು ಮರೆತ ಹೆಡ್ಡನಲ್ಲವೋ? ದೇವರು ನಿನಗೆ ದಯೆ ಪಾಲಿಸಿದ ಜೀವಮಾನವನ್ನು ವ್ಯರ್ಥವಾಗಿ ಕಳೆಯುವವನಲ್ಲವೋ? ಆಲೋಚನೆ ಮಾಡು. ನಿನ್ನನ್ನು ಉಂಟು ಮಾಡಿದ ದೇವರೊಂದಿಗೆ ಸಂಧಾನ ಮಾಡಿಕೋ. ನೀನು ಆತನ ಚಿತ್ತವನ್ನು ಮಿರಿ, ಮಾಡ ಬೇಕಾದದ್ದನ್ನು ಮಾಡದೆ, ಮಾಡ ಬಾರದ್ದನ್ನು ಮಾಡಿದ ಪಾತಕಿಯಲ್ಲವೋ? ಜೀವವುಳ್ಳ ದೇವರ ಕೈಯಲ್ಲಿ ಬೀಳುವದು ಭಯಂಕರವಾಗಿದೆ. ದೇವರನ್ನು ಹ್ಯಾಗೆ ಒಲಿಸಿಕೊಳ್ಳುತ್ತೀ? ದೇವರು ಯೇಸುಕ್ರಿಸ್ತನಲ್ಲಿದ್ದು ಮನುಷ್ಯರನ್ನು ತನಗೆ ಸಂಧಾನ ಮಾಡಿಕೊಳ್ಳುವದಕ್ಕೆ ಚಿತ್ತಯಿಸಿದನು ಎಂಬ ಸುವಾರ್ತೆಯನ್ನು ನಿನಗೆ ತಿಳಿಸುತ್ತೇನೆ. ನಿನ್ನ ರಕ್ಷಕನಾದ ಯೇಸುಕ್ರಿಸ್ತನ ಶರಣ ಹೋಗು. ಆತನ ಮುಖಾಂತರವಾಗಿ ದೇವರ ಮಗನಾಗುವ ಅಧಿಕಾರ ಪಡಕೋ. ಈ ಅಧಿಕಾರ ನೀನು ಪಡೆದರೆ, ಮನುಷ್ಯಜನ್ಮವನ್ನು ಸಾರ್ಥಕ ಮಾಡಿಕೊಂಡಿರುವಿ. ಇಹದಲ್ಲಿಯೂ ಪರದಲ್ಲಿಯೂ ಜ್ಞಾನವಂತನಾಗಿರುವಿ.

ಪ್ರಾರ್ಥನೆ.

ಆದ್ಯಂತರಹಿತನಾದ ಸರ್ವಶಕ್ತನಾದ ದೇವರೇ, ಅರಸರು ಮಂಡಲಿಕರು ಸಂಸ್ಥಾನಿಕರು ಮೊದಲಾದ ಮಹಾನುಭವರ ಹೃದಯವು ನಿನ್ನ ಕೈಯಲ್ಲಿದೆ. ನೀನು ಅವರ ಮನಸ್ಸನ್ನು ನೀರಿನ ಕಾಲಿವೆಗಳಂತೆ ಬೇಕಾದಲ್ಲಿಗೆ ತಿರುಗಿಸುತ್ತಿ. ನಮ್ಮ ಹಿಂದುಸಾಮ್ರಾಜ್ಯವನ್ನು ಆಳುವ ಮಹಾರಾಣಿಚಕ್ರವರ್ತಿನಿಯವರ ಹೃದಯವನ್ನೂ ಅವರ ಪ್ರಧಾನಿಗಳ ಹೃದಯವನ್ನೂ ಅವರಿಂದ ನಿಯುಕ್ತರಾಗಿ ಈ ದೇಶವನ್ನು ಆಳುವ ಸರ್ವೆ ಅಧಿಕಾರಸ್ಥರ ಹೃದಯವನ್ನೂ ನೀನೇ ನಡಿಸಿ ಆಳು, ಸ್ವಾಮಿ. ಅವರು ಸರ್ವ ಆಲೋಚನೆ ಕೃತ್ಯಗಳಲ್ಲಿ ನಿನ್ನ ನಾಮದ ಮಹಿಮೆಯನ್ನು ಧ್ಯಾನದಲ್ಲಿಟ್ಟು ನೀನು ಅವರಿಗೆ ಪಾಲನೆ ಮಾಡಲಿಕ್ಕೆ ಕೈವರ್ತಿಸಿದ ನಿನ್ನ ಪ್ರಜೆಯ ಕ್ಷೇಮವನ್ನೂ ಸಮಾಧಾನವನ್ನೂ ಭಕ್ತಿಯನ್ನೂ ಕಾಪಾಡುವಂತೆ ಅವರಿಗೆ ಜ್ಞಾನವನ್ನು ಕೊಡು. ಪರಮ ದಯಾಳು ತಂದೆಯೇ, ನಮ್ಮ ಪ್ರಾರ್ಥನೆಯನ್ನು ನಿನ್ನ ಪ್ರಿಯ ಕುಮಾರನೂ ನಮ್ಮ ರಕ್ಷಕನೂ ಆದ ಯೇಸು ಕ್ರಿಸ್ತನಿಗಾಗಿ ದಯೆ ಮಾಡು, ಸ್ವಾಮಿ.

ಠಸೇತೀವರ್ಗ.

(೧೮೭೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ: ಸ್ಟಾಂಪ್ ಹಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಪತ್ರ, ಇದರಲ್ಲಿ ಚಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಸೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂಪಾಯಿಗೆ ಮಿಾರಿದರೆ . . . . ೧ ಆಣೆ

b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮಿಾರದ ವಾಯಿದೆ ಇದ್ದರೆ:

	ಒಂದಕ್ಕೆ:		ದುಬಾರೆಪ್ರತಿಗೆ:		ತಿಬಾರೆಪ್ರತಿಗೆ:	
	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೨೦೦ಕ್ಕೆ ಮಿಾರದಿದ್ದರೆ	೦	೨	೦	೧	೦	೧
ರೂಪಾಯಿ ೨೦೦ಕ್ಕೆ ಮಿಾರಿ ೪೦೦ „	೦	೪	೦	೨	೦	೨
„ ೪೦೦ „ ೬೦೦ „	೦	೬	೦	೩	೦	೨
„ ೬೦೦ „ ೧೦೦೦ „	೦	೧೦	೦	೫	೦	೪
„ ೧೦೦೦ „ ೧೨೦೦ „	೦	೧೨	೦	೬	೦	೪
„ ೧೨೦೦ „ ೧೬೦೦ „	೧	೦	೦	೮	೦	೬
„ ೧೬೦೦ „ ೨೫೦೦ „	೧	೮	೦	೧೨	೦	೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂಶಕ್ಕೆ.	೧	೮	೦	೧೨	೦	೮
೧೦೦೦೦ ರೂಪಾಯಿ ಮೇಲೆ ೩೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂಶಕ್ಕೆ. . . .	೩	೦	೧	೮	೧	೦
೩೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೬	೦	೩	೦	೨	೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೇ ಠಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅಥವಾ ೧೮೭೦ನೇ ಇಸ್ವಿ ಕೋರ್ಟಫೀಸ್ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ಅಥವಾ ಮೌಲ್ಯ೧೦ ರೂಪಾಯಿಗೆ ಮಿಾರದಿದ್ದರೆ ೨ ಆಣೆ

೧೦ ರೂಪಾಯಿಗೆ ಮಿಾರಿ ೫೦ ರೂಪಾಯಿಗೆ ಮಿಾರದಿದ್ದರೆ. . ೪ ಆಣೆ

೫೦ „ . „ ೧೦೦ „ „ . . . ೮ ಆಣೆ

೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂಶಕ್ಕೆ ೮ ಆಣೆ

೧೦೦೦„ „ ಪ್ರತಿ ರೂ. ೫೦೦ಕ್ಕೆ ಯಾ ಅದರ ಅಂಶಕ್ಕೆ . . . ೨ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಉದ್ಯೋಗ ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣವನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬದಾರಿಯಾಗಿ ಬರಕೊಡುವಂಥಾದ್ದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಮಿಾರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . ೫ ರೂಪಾಯಿ

16. ಏಲಂ ಮಾಡಿದ ಆಸ್ತಿ ಬಗ್ಗೆ ಕೊಡ ತಕ್ಕ ದರಖಾಸ್ತ ಪಟ್ಟಿ—21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ) . . ೧ ಆಣೆ

21. 36. (Conveyance) ಕೊನ್ವೆಯನ್ಸ್ ಯಾನೆ ಕ್ರಯಸಾಧನ, ದಾನಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂ. ೫೦ಕ್ಕೆ ಮೀರದಿದ್ದರೆ	೮ ಆಣೆ
„ ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ	೧ ರೂಪಾಯಿ
„ ೧೦೦ „ „ ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ	೧ ರೂಪಾಯಿ
„ ೧೦೦೦ „ „ ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂಶಕ್ಕೆ	೫ ರೂಪಾಯಿ

29. ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ಠೇವಣಿ ಇಟ್ಟು, ಅಥವಾ ಚರಸೊತ್ತು ಈಡು ಇಟ್ಟು ಮಾಡಿದ ಸಾಲವನ್ನು ತಿರಿಗಿ ಪಾವತಿ ಮಾಡುವ ಬಂದೋಬಸ್ತಿಗಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ } 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ತಸೆ

b) ೩ ತಿಂಗಳೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ *b*ಯಲ್ಲಿಯ ತಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲ ಹೊರಿಸಿ ಉಂಟಾಗುವ ದಸ್ತಾವೇಜು:— *a)* ಪ್ರಥಮತಾ ಆದ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ತಸೆ

b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ತಸೆ

32. ಪಾಲುಗಾರಿಕೇ ದಸ್ತಾವೇಜು. . . . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೇ ದಸ್ತಾವೇಜು . . . . . ೫ ರೂಪಾಯಿ

35. ಯಾವದೊಂದು ಸೊತ್ತಿನ ಬದಲಾವಣೆ ದಸ್ತಾವೇಜು—ಅಂಥಾ ಸೊತ್ತಿನ ಹೆಚ್ಚಾದ ಕಿಮ್ಮತ್ತಿನ ಬಗ್ಗೆ 21ನೇ ಅಂಕೆಯಲ್ಲಿ ಕ್ರಯಸಾಧನಕ್ಕೆ ಹೇಳಿರುವಷ್ಟೆ ತಸೆ

37. ಪಾಲುಪಟ್ಟಿ:—ಇದರಲ್ಲಿ ಪಾಲು ಮಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೇ ತಸೆ.

39. ಗೇಣಿಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿ ವಾಯಿದೆ ಒಂದು ವರುಷಕ್ಕೆ ಮೀರದಿದ್ದರೆ . . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

ಒಂದು ವರುಷಕ್ಕೆ ಮೀರಿ, ೩ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿ ಚೀಟಿನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ ಪ್ರಥಮದ ೧೦ ವರ್ಷದಲ್ಲಿ ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ಸಲುವಾಗಿ ಗೇಣಿಗೆ ಕೊಡೋಣಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ—ಗೇಣಿಚೀಟಿನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟದ ಸಲುವಾಗಿ ಸಹಾ ಗೇಣಿಗೆ ಕೊಡೋಣಾಗಿದ್ದರೆ— ಗೇಣೀ ಬಗ್ಗೆ ಎಷ್ಟು ತಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟು ತಸೆ ಸಹ.

41. (Letter of Credit) ಲೆಟರ್ ಒಫ್ ಕ್ರೇಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಅತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು) ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, ಅಥವಾ 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಅದರಲ್ಲಿ ನಮೂದಿಸಿದ ಸೊತ್ತನ್ನು ಯಾ ಅದರ ಅಂಶವನ್ನು ಅಡವುದಾರಗೆ ಒಪ್ಪಿಸಿ ಕೊಟ್ಟರೆ, ಇಲ್ಲವೆ ಒಪ್ಪಿಸಿ ಕೊಡುವರೆ ಸಮ್ಮತಿಸಿದರೆ. . . . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಯಾ ಒಪ್ಪಿಸಲಿಕ್ಕೆ ಸಮ್ಮತಿಸದೆ ಇದ್ದ ಪಕ್ಷಕ್ಕೆ— . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲನಾಗಲೀ ಮುತ್ತಾಲಿಕನಾಗಲೀ ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಮಿಾರಿದ ಯಾವ ಸರಕನ್ನಾಗಲಿ ಜೀನಸನ್ನಾಗಲೀ ಕೊಂಡುಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು). . . . . ೧ ಆಣೆ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತ್ಯಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ಟ್ರೀ ಬಗ್ಗೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೮ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕ ಜನರಿಗೆ ಅಧಿಕಾರ ಕೊಡುವದಾದರೆ . . . . ೧ ರೂಪಾಯಿ

c) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ ೫ಕ್ಕೆ ಮಿಾರದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ . . . . ೫ ರೂಪಾಯಿ

d) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ ೫ಕ್ಕೆ ಮಿಾರಿ ೧೦ಕ್ಕೆ ಮಿಾರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಮೊಬಲಗು ಯಾ ಮೌಲ್ಯ ಇಪ್ಪತ್ತು ರೂಪಾಯಿಗೆ ಮಿಾರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಒಂದದ್ದಕ್ಕೆ ಕೊಡುವ ರಶೀದಿ . ೧ ಆಣೆ

53. ಅಡವಿನ ಸೊತ್ತನ್ನು ತಿರಿಗಿ ಕೊಡುವ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಮಿಾರದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲಿ ಫಲಾನೆ ಸೊತ್ತಿನ ಮೇಲಾಗಲಿ ತನಗಿರುವ ಬಾಧ್ಯತೆಯನ್ನು ಬಿಟ್ಟು ಬಿಡುವ ದಸ್ತಾವೇಜು):—

a) ಬಾಧ್ಯತೆಯ ಮೊಬಲಗು ೧೦೦೦ ರೂಪಾಯಿಗೆ ಮಿಾರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . ೫ ರೂಪಾಯಿ

57. (Settlement) ಸೆಟ್ಲಿಮೆಂಟ ಯಾನೆ ವ್ಯವಸ್ಥಾಪತ್ರ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

58. (Shipping Order) ಸಿಪ್ಪಿಂಗ್ ಒರ್ಡರ್ (ಅಂದರೆ ಜಹಜಿನ ಮೇಲೆ ಜೀನಸುಗಳನ್ನು ವೈಯುವದಕ್ಕೆ ಕೊಡುವ ಪತ್ರ) . . . . ೧ ಆಣೆ

59. ಗೇಣಿ ಸೋಡಚೀಟು:—

a) ಗೇಣಿಚೀಟಿನ ಠಸೆ ೫ ರೂಪಾಯಿಗೆ ಮಿಾರದಿದ್ದರೆ—ಗೇಣಿಚೀಟಿನಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . ೫ ರೂಪಾಯಿ

60. (Transfer) ಟ್ರೆನ್ಸ್‌ಫರ್ (ಪರಭಾರೆಪತ್ರ ಯಾ ಮೇಲ್ಸಾಧನ):—

a) ಯಾವದೊಂದು ಕಂಪನಿಯ ಯಾ ಸಂಘದ ಪಾಲುಗಳ—21ನೇ ಅಂಕೆಯಲ್ಲಿ ಕಾಣಿಸಿದ ಹಾಸಲಿನ ಕಾಲವಾಶಿ.

b) ದಸ್ತಾವೇಜು, ಗೇಣಿ, ಅಡವು, ಯಾ ಪೊಲಿಸಿ ಆಫ್ ಇನ್ಶ್ಯೂರೆನ್ಸ (ಬೀಮು ಉತ್ತ್ರಾಯಿಸೋಣ)ದ ಏನೊಂದು ಸಮ್ಮಂಧ—ಆ ದಸ್ತಾವೇಜು, ಗೇಣಿ, ಅಡವುದಸ್ತಾವೇಜು, ಯಾ ಪೊಲಿಸಿ ಆಫ್ ಇನ್ಶ್ಯೂರೆನ್ಸಿನ ಹಾಸಲು ೫ ರೂಪಾಯಿಗೆ ಮಿಾರದಿದ್ದರೆ, ಅದರಷ್ಟೆ ಹಾಸಲು

ಇತರ ಸಂಗತಿಯಲ್ಲಿ — ೫ ರೂಪಾಯಿ

